# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಜನವರಿ 31, 2023

ಸಂಪುಟ : 49 ಸಂಚಿಕೆ : 259 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com



॥ ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಸನ್ನ ॥

## ಆರತಕ್ಷತೆ ಆಮಂತ್ರಣ



**ಮಾತೃಶ್ರೀ ಶ್ರೀಮತಿ ಮೇಕಾ ಜಾನಕಿ ಲಕ್ಷ್ಮೀ, ಪಿತೃಶ್ರೀ ದಿ॥ ಮೇಕಾ ಸೂರ್ಯನಾರಾಯಣ**

ಅಧ್ಯಕ್ಷರು, ಆಶ್ರಯ ಯೋಜನೆ, ಕರ್ನಾಟಕ ಸರ್ಕಾರ, ಅಧ್ಯಕ್ಷರು, ಮಾಯಕೊಂಡ ಬ್ಲಾಕ್, ಕಾಂಗ್ರೆಸ್ ಕಮಿಟಿ
ಮಾಜಿ ಅಧ್ಯಕ್ಷರು, ಕಡ್ಲೇಬಾಳು ಗ್ರಾ.ಪಂ., ದಾವಣಗೆರೆ ಜಿಲ್ಲಾ ಕಮ್ಮ ಸಮಾಜದ ಅಧ್ಯಕ್ಷರು, ಇವರ ಕೃಪಾಶೀರ್ವಾದಗಳೊಂದಿಗೆ...



**ಶ್ರೀಮತಿ ವಿಜಯದುರ್ಗ ಮತ್ತು ಶ್ರೀ ಮೇಕಾ ಸತ್ಯನಾರಾಯಣ** ಇವರು ಮಾಡುವ ವಿಜ್ಞಾಪನೆಗಳು...



ನಮ್ಮ ಜ್ಯೇಷ್ಠ ಪುತ್ರಿಯ ವಿವಾಹ ನಂತರದ ಆರತಕ್ಷತೆಯ ಶುಭ ಕಾರ್ಯಕ್ರಮಕ್ಕೆ ಆತ್ಮೀಯ ಆಮಂತ್ರಣ,
ತಾವುಗಳು ಸುಕುಟುಂಬ ಸಮೇತರಾಗಿ ಆಗಮಿಸಿ, ನಮ್ಮ ಆತಿಥ್ಯವನ್ನು ಸ್ವೀಕರಿಸಿ
ನೂತನ ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುತ್ತೇವೆ..

**ಚಿ॥ಲ॥ಕುಂ॥ಸೌ॥ ಜ್ಞಾನಿತ ಮತ್ತು ಚಿ॥ ರಾ॥ ಶರತ್ ಚೌದರಿ**

(ಶ್ರೀಮತಿ ನಾಗಜ್ಯೋತಿ ಮತ್ತು ಶ್ರೀ ಮುಳ್ಳಪೂಡಿ ವೀರ ವೆಂಕಟ ಸತ್ಯನಾರಾಯಣ (MVV)
ಮಾನ್ಯ ಲೋಕಸಭಾ ಸದಸ್ಯರು, ವಿಶಾಖಪಟ್ಟಣಂ, ಆಂಧ್ರಪ್ರದೇಶ, ಇವರ ಏಕೈಕ ಪುತ್ರ)

ಆರತಕ್ಷತೆ :
ದಿನಾಂಕ : 31.01.2023,
ಮಂಗಳವಾರ ಮಧ್ಯಾಹ್ನ : 12.00 ಗಂಟೆಗೆ
ಸ್ಥಳ : ಎಸ್.ಎಸ್. ಕನ್ವೆನ್ಷನ್ ಸೆಂಟರ್
(ಎಸ್.ಎಸ್. ಮಾಲ್)
ಶಾಮನೂರು ರಸ್ತೆ, ದಾವಣಗೆರೆ.

ತಮ್ಮ ಆಗಮನಾಭಿಲಾಷಿಗಳು :
ಶ್ರೀ ಮೇಕಾ ಸೂರ್ಯನಾರಾಯಣರವರ ಮಕ್ಕಳು
ಅಳಿಯಂದಿರು ಮತ್ತು ಮೊಮ್ಮಕ್ಕಳು, ದಾವಣಗೆರೆ.
ಶ್ರೀ ಚಿಲುಕೂರಿ ಕೃಷ್ಣಮೂರ್ತಿ ಮತ್ತು ಕುಟುಂಬದವರು, ಗಂಗಾವತಿ.
ಕು. ಡಾ॥ ಹರಿಚಂದನ ಮೇಕಾ
ಹಾಗೂ ಬಂಧು-ಮಿತ್ರರು.

ಇಂದ :
ಶ್ರೀ ಮೇಕಾ ಮುರಳಿಕೃಷ್ಣ
ಮಾಜಿ ಅಧ್ಯಕ್ಷರು,
ದಾವಣಗೆರೆ ತಾಲ್ಲೂಕು ಪಂಚಾಯ್ತಿ
ಸೆಕ್ಟರ್ ಕೌನ್ಸಿಲರ್,
ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ





# ಸಾಮೂಹಿಕ ಪೂಜೆಯಿಂದ ಸ್ವಾಸ್ಥ್ಯ ಸಮಾಜ ನಿರ್ಮಾಣ

## ಹಳ್ಳಿಹಾಳ್ : ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಶ್ರೀ ಸಿದ್ದಲಿಂಗ ಸ್ವಾಮೀಜಿ ಅಭಿಮತ



ಮಲೇಬೆನ್ನೂರು, ಜ.30- ಸಾಮೂಹಿಕ ಪೂಜೆಗಳಿಂದ ಸಮಾಜದಲ್ಲಿ ಸ್ವಾಸ್ಥ್ಯ ಹಾಗೂ ಗ್ರಾಮದಲ್ಲಿ ಸಾಮರಸ್ಯ, ಮನಗಳು ಒಂದಾಗಲು ಸಹಕಾರಿ ಆಗುತ್ತದೆ ಎಂದು ವಿನಾಯಕನಗರ ಕ್ಯಾಂಪಿನ ಕಾಲಜ್ಞಾನಿ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಅವರು ಸೋಮವಾರ ಹಳ್ಳಿಹಾಳ್ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಗಳಿ ವಲಯದ ವತಿಯಿಂದ ಹಮ್ಮಿಕೊಂಡಿದ್ದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಸಮಾಜದಲ್ಲಿ ಸಾಕಷ್ಟು ಪರಿವರ್ತನೆಗೆ ಕಾರಣರಾಗಿದ್ದಾರೆ. ಸಾಮೂಹಿಕ ಸತ್ಯನಾರಾಯಣ ಪೂಜೆಯಿಂದ ದ್ವೇಷ, ಅಸೂಯೆ ದೂರವಾಗಿ ಪ್ರೀತಿ, ಶ್ರದ್ಧೆ ಬೆಳೆಯುತ್ತದೆ.

ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಬಡವರಿಗೆ, ಅನಾರೋಗ್ಯ ಪೀಡಿತರಿಗೆ ಅಗತ್ಯ ಸೌಲಭ್ಯ ಕಲ್ಪಿಸುತ್ತಿರುವ ಈ ಯೋಜನೆ, ಸರ್ಕಾರ ಮಾಡದಂತಹ ಕೆಲಸ ಮಾಡುತ್ತಿದೆ ಎಂದು ಸ್ವಾಮೀಜಿ ಶ್ಲ್ಯಾಘಿಸಿದರು.

ಧಾರ್ಮಿಕ ಕಾರ್ಯಕ್ರಮವನ್ನು ದೀಪ ಬೆಳಗಿಸಿ, ಉದ್ಘಾಟಿಸಿದ ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಈ ಹಿಂದೆ ದೇಶದ ಶೇ.5 ರಷ್ಟು ಜನರಿಗೆ ಮಾತ್ರ ಬ್ಯಾಂಕ್ ವ್ಯವಹಾರ ಗೊತ್ತಿತ್ತು. ಧರ್ಮಸ್ಥಳ ಯೋಜನೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಂದಾಗಿ ಈಗ ದೇಶದ ಶೇ.90 ರಷ್ಟು ಜನ ಬ್ಯಾಂಕಿನ ವ್ಯವಹಾರ ಹೊಂದಿದ್ದಾರೆ. ಇದರಿಂದಾಗಿ ಮಹಿಳೆಯರು ಸಾಕಷ್ಟು ಹಣ ಉಳಿತಾಯ ಮಾಡುವಂತಾಗಿರುವುದು ಸಂತಸ ಎಂದು ಹೇಳಿದರು.

ಜಿ.ಪಂ. ಮಾಜಿ ಅಧ್ಯಕ್ಷ ಎ.ಗೋವಿಂದ ರೆಡ್ಡಿ ಮಾತನಾಡಿ, ಬಡವರಿಗಾಗಿ ಇಂದಿರಾಗಾಂಧಿ ಅವರು 20 ಅಂಶಗಳ ಕಾರ್ಯಕ್ರಮಗಳ ಮೂಲಕ ಜಾರಿಗೆ ತಂದಿದ್ದ ಯೋಜನೆಗಳನ್ನೇ ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆಯವರು ಪರಿಣಾಮಕಾರಿಯಾಗಿ ಮಾಡುತ್ತಿರುವುದು ಸಮಾಜದಲ್ಲಿ ಹೊಸ ಬದಲಾವಣೆಗೆ ಪೂರಕವಾಗಿದೆ ಎಂದು ಶ್ಲ್ಯಾಘಿಸಿದರು.

ಮಲೇಬೆನ್ನೂರು ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಮಂಜುಳಾಜಿ, ಜಿ.ಪಂ. ಮಾಜಿ ಸದಸ್ಯರಾದ ಎಂ.ನಾಗೇಂದ್ರಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ, ವಿಟಿಯು ವಿಶ್ರಾಂತ ಕುಲಪತಿ ಡಾ. ಹೆಚ್.ಮಹೇಶಪ್ಪ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಧರ್ಮಸ್ಥಳ ಯೋಜನೆಗಳನ್ನು ಕೊಂಡಾಡಿದರು.

ಗ್ರಾಮದ ಮುಖಂಡ ಹಲ್ಮನಿ ವೀರನಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಮಾತನಾಡಿದರು.

ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಜಿ.ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಜಿಗಳಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ವಿನೋದ ಹಾಲೇಶ್ ಕುಮಾರ್, ಮಾಜಿ ಅಧ್ಯಕ್ಷೆ ಶ್ರೀಮತಿ ಕವಿತಾ ಮಾಕನೂರು ಶಿವು, ಜಿಗಳಿ ಪಿಎಸಿಎಸ್ ಅಧ್ಯಕ್ಷ ಟಿ.ಹೆಚ್.ಮಂಜುನಾಥ್, ವರ್ತಕ ಚಿಟ್ಟಕಿ ನಾಗರಾಜ್, ತಾ.ಜೆಡಿಎಸ್ ಅಧ್ಯಕ್ಷ ಹೆಚ್.ಟಿ. ಪರಮೇಶ್ವರಪ್ಪ, ಪೂಜಾ ವ್ಯವಸ್ಥಾಪನ ಸಮಿತಿಯ ಗೌರವಾಧ್ಯಕ್ಷರಾದ ಜಿಗಳಿ ಆನಂದಪ್ಪ, ಯಲವಟ್ಟಿ ಯೋಮಕೇಶ್ವರಪ್ಪ, ಅಧ್ಯಕ್ಷ ಪ್ರಕಾಶ್ ಹದಡಿ, ಉಪಾಧ್ಯಕ್ಷ ಜಿ. ಬೇವಿನಹಳ್ಳಿಯ ಬಿ.ಕೆ.ಮಹೇಶ್ವರಪ್ಪ, ಸಹ ಕಾರ್ಯದರ್ಶಿ ಹೆಚ್.ವಿ. ಚಂದ್ರಶೇಖರ್, ಕೋಶಾಧಿಕಾರಿ ಕೆ.ಜಿ. ಬಸವನಗೌಡ, ಖಜಾಂಚಿ ಜಿಗಳಿಯ ನಾಗಸನಹಳ್ಳಿ ಬಸವರಾಜ್, ಶ್ರೀ ಮುರುಡ ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಈರನಗೌಡ, ಬಿ.ಎಲ್.ಗೌಡ, ಹೆಚ್.ಎಸ್. ಮಲ್ಲನಗೌಡ, ಯಲವಟ್ಟಿಯ ಜಿ.ಆಂಜನೇಯ, ಎ.ರಾಮಚಂದ್ರಪ್ಪ, ಡಿ.ಬಸವನಗೌಡ, ಜಿಗಳಿಯ ಗೌಡ್ರ ಬಸವರಾಜಪ್ಪ, ಹೆಚ್.ಡಿ. ಹನುಮಗೌಡ, ಮಾಳಗಿ ತಿಮ್ಮನಗೌಡ, ಮಲೇಬೆನ್ನೂರಿನ ಎಂ.ಬಿ.ಸಜ್ಜು, ಶ್ರೀಮತಿ ಗೌರಮ್ಮ, ಧರ್ಮರಾಜ್, ಯೋಜನೆಯ ಜಿಗಳಿ ವಲಯದ ಮೇಲ್ವಿಚಾರಕರಾದ ಶ್ರೀಮತಿ ಪದ್ಮಾವತಿ ಮತ್ತು ಇತರರು ಭಾಗವಹಿಸಿದ್ದರು.

# ಫೆಬ್ರವರಿ 25 ರಂದು ಜಗಳೂರಿನಲ್ಲಿ ಕ.ಸಾ.ಪ ತಾಲ್ಲೂಕು ಸಮ್ಮೇಳನ



ಜಗಳೂರು, ಜ.30- ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಸಮ್ಮೇಳನವನ್ನು ಬಯಲುರಂಗ ಮಂದಿರ ಆವರಣದಲ್ಲಿ ಫೆಬ್ರವರಿ 25ರ ಶನಿವಾರ ನಡೆಸಲು ತೀರ್ಮಾನಿಸಲಾಯಿತು.

ಪಟ್ಟಣದ ತಾಲ್ಲೂಕು ಕಛೇರಿ ಸಭಾಂಗಣದಲ್ಲಿ ತಹಶೀಲ್ದಾರ್ ಜಿ.ಸಂತೋಷ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಬರದ ನಾಡಿನಲ್ಲಿ ಕಾರ್ಮಿಕ, ರೈತ, ಬಡ ಕೂಲಿಕಾರ್ಮಿಕರಿಂದ, ಕನ್ನಡಪರ ಅಭಿಮಾನಿಗಳಿಂದ ದೇಣಿಗೆ ಸಂಗ್ರಹಣೆ ಅಗತ್ಯವಿದೆ ಎಂದು ಸಾಹಿತಿಗಳಾದ ಎನ್.ಟಿ.ಎರ್ರಿಸ್ವಾಮಿ ಸಲಹೆ ನೀಡಿದರು.

'ಬರದನಾಡಿನಲ್ಲಿ ಬಹಳ ವರ್ಷಗಳ ನಂತರ ಕಸಾಪ ಸಮ್ಮೇಳನ ಆಯೋಜಿಸಿರುವುದು ಸಂತಸದ ಸಂಗತಿ. ದಲಿತಪರ ಸಂಘಟನೆಗಳಿಂದ ಸಮ್ಮೇಳನಕ್ಕೆ ಸರ್ವ ಸಹಕಾರವಿದೆ. ದಲಿತ ಕವಿಗಳನ್ನು ಗುರುತಿಸಿ, ಸಾಹಿತ್ಯ ಗೋಷ್ಠಿಗಳಿಗೆ ಆಹ್ವಾನಿಸಬೇಕು.

ಸಮ್ಮೇಳನದಲ್ಲಿ ಸ್ಥಳೀಯ ಕಲಾವಿದರನ್ನು ಸದ್ಬಳಕೆ ಮಾಡಿಕೊಂಡು ಖರ್ಚು ಮಿತಗೊಳಿಸಿ, ಉನ್ನತ ಸಾಧಕರಿಗೆ ಮಾತ್ರ ಪುರಸ್ಕರಿಸಬೇಕು ಎಂದು ದಲಿತ ಮುಖಂಡರಾದ ಶಂಭುಲಿಂಗಪ್ಪ, ಓಬಣ್ಣ, ಅಭಿಪ್ರಾಯ ವ್ಯಕ್ತಪಡಿಸಿದರು.

ಕಸಾಪ ಅಧ್ಯಕ್ಷರಾದ ಸುಜಾತಮ್ಮ ಮಾತನಾಡಿ, ತಾಲ್ಲೂಕು ಸಮ್ಮೇಳನದ ಯಶಸ್ವಿಗೆ ಎಲ್ಲರೂ ಕೈಜೋಡಿಸಬೇಕು. ಸಮ್ಮೇಳನಕ್ಕೆ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅನುದಾನ ಒಂದು ಲಕ್ಷ ರೂ. ಲಭ್ಯವಿದ್ದು, ಸಮ್ಮೇಳನಕ್ಕೆ ಹೆಚ್ಚಿನ ಆರ್ಥಿಕ ಸಂಪನ್ಮೂಲದ ಅಗತ್ಯವಿದೆ ಎಂದು ಮನವಿ ಮಾಡಿದರು.

ತಹಶೀಲ್ದಾರ್ ಸಂತೋಷ್ ಕುಮಾರ ಮಾತನಾಡಿ, ಎಲ್ಲರ ಅಭಿಪ್ರಾಯದಂತೆ ಶಾಸಕರ ಅನುಪಸ್ಥಿತಿಯಲ್ಲಿ ತುರ್ತಾಗಿ ಕಸಾಪ ತಾಲ್ಲೂಕು ಸಮ್ಮೇಳನದ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ. ತಮ್ಮ ಸಮಿತಿಗಳ ಸಲಹೆಯಂತೆ ನಾವು ಬದ್ದ, ಶೀಘ್ರದಲ್ಲಿ ತಾಲ್ಲೂಕಿನ ಸಮಾಜ, ಸಂಘಟನೆ, ಸಾಹಿತ್ಯಾಭಿಮಾನಿಗಳನ್ನು ಒಳಗೊಂಡು ಜವಾಬ್ದಾರಿ ವಹಿಸಿದರೆ ಕಾರ್ಯಕ್ರಮ ಅನುಷ್ಠಾನ ಸಾಧ್ಯ. ಮನಸ್ತಾಪಗಳು ಆಗದಂತೆ ನೋಡಿಕೊಳ್ಳೋಣ. ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಇತರೆ ಹಿತೈಷಿಗಳಿಂದ ಧನ ಸಹಾಯ ಕಾರ್ಯಕ್ರಮದ ರೂಪು-ರೇಷೆಗಳನ್ನು ತಯಾರಿಸಲು ಮತ್ತೊಂದು ಸಭೆಯಲ್ಲಿ ಕಾರ್ಯಕ್ರಮದ ಬಜೆಟ್ ತಯಾರಿಸೋಣ ಎಂದು ಹೇಳಿದರು.

ಪ.ಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಪ್ರಾಂಶುಪಾಲ ಬಿ. ನಾಗಲಿಂಗಪ್ಪ, ಪ.ಪಂ ಸದಸ್ಯ ಲುಕ್ಮಾನ್ ಖಾನ್, ಎನ್.ಜಿ.ಓ ತಾಲ್ಲೂಕು ಅಧ್ಯಕ್ಷ ಚಂದ್ರಪ್ಪ, ಸಾಹಿತಿ ಗೀತಾ ಮಂಜು, ಕಸಾಪ ಸದಸ್ಯ ಕೃಷ್ಣಮೂರ್ತಿ, ರವಿಕುಮಾರ್, ಗೌರಮ್ಮ, ವೀರಸ್ವಾಮಿ, ಸಿ.ತಿಪ್ಪೇಸ್ವಾಮಿ, ಸತೀಶ್, ಮಾದಿಹಳ್ಳಿ ಮಂಜುನಾಥ್ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಹೊನ್ನಾಳಿ ಪುರಸಭೆ ಅಧ್ಯಕ್ಷರಾಗಿ ಸುಮಾ ಮಂಜುನಾಥ್ ಇಂಚರ



ಹೊನ್ನಾಳಿ, ಜ. 30- ಪಟ್ಟಣದ ಪುರಸಭೆಯ ಅಧ್ಯಕ್ಷರಾಗಿ ಸುಮಾ ಮಂಜುನಾಥ್ ಇಂಚರ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಅಧ್ಯಕ್ಷರಾಗಿದ್ದ ಟಿ.ಹೆಚ್. ರಂಗನಾಥ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನದಲ್ಲಿ ಉಪಾಧ್ಯಕ್ಷರಾಗಿದ್ದ ರಂಜಿತ ಚನ್ನಪ್ಪ ಅವರು ಪ್ರಭಾರಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು.

ಸುಮಾ ಮಂಜುನಾಥ್ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಇವರನ್ನು ಅವಿರೋಧ ಆಯ್ಕೆ ಎಂದು ತಹಶೀಲ್ದಾರ್ ತಿರುಪತಿ ಪಾಟೀಲ್ ಘೋಷಿಸಿದರು. ಚುನಾವಣಾ ಸ್ಥಳಕ್ಕೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರು ಭೇಟಿ ನೀಡಿ ನೂತನ ಅಧ್ಯಕ್ಷರನ್ನು ಅಭಿನಂದಿಸಿದ್ದಾರೆ. ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ರಂಜಿತಾ ಚನ್ನಪ್ಪ, ಮಾಜಿ ಅಧ್ಯಕ್ಷರಾದ ಬಾಬು ಹೋಬಳದಾರ್, ರಂಗಪ್ಪ, ಕೆ.ವಿ. ಶ್ರೀಧರ್, ಮುಖ್ಯಾಧಿಕಾರಿ ಎಸ್.ಆರ್. ವೀರಯ್ಯ ಸೇರಿದಂತೆ ಮುಖಂಡರಾದ ಮಂಜುನಾಥ್ ಇಂಚರ್, ನವೀನ್ ಇಂಚರ್ ಮತ್ತಿತರರಿದ್ದರು.

## ಹೆಮ್ಮನಬೇತೂರು ಕರಿಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಹೆಮ್ಮನಬೇತೂರು ಗ್ರಾಮದ ವಾಸಿ **ಶ್ರೀ ರಾಮಘಟ್ಟದ ಕರಿಬಸಪ್ಪ** ಅವರು ದಿನಾಂಕ 30-01-2023ರ ಸೋಮವಾರ ರಾತ್ರಿ 8.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಪತ್ನಿ, ಐವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31-01-2023ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಹೆಮ್ಮನಬೇತೂರು ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ
ಪತ್ನಿ : ಶ್ರೀಮತಿ ಸುಮಿತ್ರಮ್ಮ ಕರಿಬಸಪ್ಪ ಮತ್ತು ಮಕ್ಕಳು, ಹೆಮ್ಮನಬೇತೂರು. ಮೊ. : 99013 20183

## ಕಾಶೀಪುರ ಗ್ರಾಮದ ಅನುಸೂಯಮ್ಮ ನಿಧನ



ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ಸಣ್ಣನಂಜಪ್ಪರ ದಿ|| ಜಯದೇವಪ್ಪನವರ ಧರ್ಮಪತ್ನಿ **ಶ್ರೀಮತಿ ಅನುಸೂಯಮ್ಮ** (85 ವರ್ಷ) ಅವರು ದಿನಾಂಕ 30-01-2023ರ ಸೋಮವಾರ ತಡರಾತ್ರಿ 12.45ಕ್ಕೆ ನಿಧನರಾದರು. ನಾಲ್ವರು ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31-01-2023ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಕಾಶೀಪುರ ಗ್ರಾಮದಲ್ಲಿ ನೆರವೇರಲಿದೆ.

- ದುಃಖತಪ್ತ ಕುಟುಂಬ ವರ್ಗ,
ಮೊ. : 94801 62934

## ಕೈಲಾಸ ಶಿವಗಣಾರಾಧನೆ ಆಹ್ವಾನ



|| ಶ್ರೀ ಉಜ್ಜಿನಿ ಸಿದ್ದೇಶ್ವರ ಪ್ರಸನ್ನ ||
ದಾವಣಗೆರೆ ಸಿಟಿ ದೇವರಾಜ್ ಅರಸ್ ಬಡಾವಣೆ ವಾಸಿಗಳಾದ
**ಶ್ರೀಮತಿ ಉಮಾ ಮತ್ತು ಮಕ್ಕಳು**
ಮಾಡುವ ವಿಜ್ಞಾಪನೆಗಳು.
ದಿನಾಂಕ 28.01.2023ರ ಶನಿವಾರ ಬೆಳಿಗ್ಗೆ 8.40ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಜೆ. ನಾಗರಾಜ್‌ರವರು**
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ:01.02.2023ರ ಬುಧವಾರ ಬೆಳಿಗ್ಗೆ 10.00 ಗಂಟೆಗೆ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್, ಪೂಜಾ ಹೋಟೆಲ್ ಹಿಂಭಾಗ, 10ನೇ ಕ್ರಾಸ್ ಡೋರ್ ನಂ. 164ರ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

**ದುಃಖತಪ್ತರು :**
ಶ್ರೀಮತಿ ಉಮಾ ಮತ್ತು ಮಕ್ಕಳು ಹಾಗೂ ಬಂಧು ಮಿತ್ರರು.
ಮೊ : 97399 16833

# ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ : ಸಚಿವೆ ಶಶಿಕಲಾ ಜೊಲ್ಲೆ



ಕೊಟ್ಟೂರು, ಜ. 30 - ತರಳಬಾಳು ಹುಣ್ಣಿಮೆಯ ಸಂದರ್ಭದಲ್ಲಿ ಕಾಳಾಪುರ ಗ್ರಾಮದಲ್ಲಿ ನಡೆದ ಘಟನೆ ದುರ್ದೈವದ ಸಂಗತಿ. ವೃದ್ಧರು ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ಎಸಗಿ ಮನೆಗಳು, ವಾಹನಗಳನ್ನು ಹಾನಿ ಮಾಡಿರುವುದು ಹೀನಾಯ ಕೃತ್ಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

ತಾಲ್ಲೂಕಿನ ಉಜ್ಜಯಿನಿ ಪೀಠಕ್ಕೆ ಸೋಮವಾರ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಈ ಘಟನೆಗೆ ಸಂಬಂಧಿಸಿದಂತೆ ದೂರು ದಾಖಲಾಗಿದ್ದು, 12 ಜನರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಯಾರೇ ತಪ್ಪಿತಸ್ಥರಾಗಿದ್ದರೂ ಅವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಎಸ್‌ಪಿ ಅವರಿಗೆ ಈಗಾಗಲೇ ಆದೇಶಿಸಿದ್ದೇನೆ. ಈ ಘಟ ನೆಗೆ ಸಂಬಂಧಿಸಿದಂತೆ ಸಮಗ್ರ ವರದಿಯನ್ನು ಮುಖ್ಯಮಂತ್ರಿಗಳಿಗೆ ಶೀಘ್ರದಲ್ಲಿಯೇ ಸಲ್ಲಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪೀಠಾಧೀಶರಾದ ಸಿದ್ಧಲಿಂಗ ಶಿವಾಚಾರ್ಯರು, ಕೂಡ್ಲಿಗಿ ಕ್ಷೇತ್ರದ ಶಾಸಕ ಎನ್.ವೈ.ಗೋಪಾಲಕೃಷ್ಣ, ಬಿಜೆಪಿ ಜಿಲ್ಲಾ ಘಟಕಾಧ್ಯಕ್ಷ ಪಿ. ಚನ್ನಬಸವನಗೌಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರ್ಷಲ್ ಭೋಯರ್, ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್, ತಹಶೀಲ್ದಾರ ಎಂ.ಕುಮಾರಸ್ವಾಮಿ ಮುಂತಾದ ಅಧಿಕಾರಿಗಳು ಹಾಗೂ ಮುಖಂಡರು ಇದ್ದರು.

# ಗೋವಿನಹಾಳ್ ಪಿಎಸಿಎಸ್ ಅಧ್ಯಕ್ಷರಾಗಿ ಜಿ.ಟಿ. ಕಟ್ಟೆಯ ಚಿಕ್ಕಪ್ಪರ ತಿಪ್ಪೇಶಪ್ಪ



ಮಲೇಬೆನ್ನೂರು, ಜ. 30 - ಗೋವಿನಹಾಳ್ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜಿ.ಟಿ. ಕಟ್ಟೆಯ ಚಿಕ್ಕಪ್ಪರ ತಿಪ್ಪೇಶಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನಿತಾ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಸಂಘದ ನಿರ್ದೇಶಕರಾದ ಬಿ.ಹೆಚ್. ಗದಿಗೆಪ್ಪ, ಕುಮಾರ್. ಎಸ್, ಪಾಟೀಲ್, ಕೆ.ಹೆಚ್. ಬಸವರಾಜ್, ಶ್ರೀಮತಿ ಗಿರಿಜಮ್ಮ, ಶ್ರೀಮತಿ ಪುಷ್ಪಾ, ಕೆ.ಎಂ. ಬಸವರಾಜ್, ಕೆ.ಎಂ.ಹನುಮಗೌಡ, ಟಿ. ನಿಜಗುಣ, ಗ್ರಾಮದ ಮುಖಂಡರಾದ ಜಿ.ರುದ್ರಪ್ಪ, ಸಿ.ಹೆಚ್. ಸಿದ್ದಪ್ಪ, ಕೆ.ಬಸವನಗೌಡ, ಟಿ.ಬಿ. ಮಾದಪ್ಪ, ಸಂಘದ ಸಿಇಓ ಕೆ.ಬಿ. ಕರಿಬಸಪ್ಪ ಈ ವೇಳೆ ಹಾಜರಿದ್ದರು. ಚುನಾವಣೆ ನಂತರ ನೂತನ ಅಧ್ಯಕ್ಷರನ್ನು ಜಿ.ಪಂ.ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ ಅಭಿನಂದಿಸಿದರು.

# ಅಧಿಕಾರಿಗಳ ಬಳಿ ರೈತರ ಆಕ್ರೋಶ



**(3ನೇ ಪುಟದಿಂದ)** ಮೇಲ್ಭಾಗದಲ್ಲಿ ಅಕ್ರಮ ಪಂಪ್‌ಸೆಟ್‌ಗಳನ್ನು ತೆರವು ಮಾಡಿ ಎಂದು ಆಗ್ರಹಿಸಿದರು. ನಂತರ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿದ ರೈತರು ಅಧಿಕಾರಿಗಳೊಂದಿಗೆ ದಾವಣಗೆರೆಗೆ ತೆರಳಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರನ್ನು ಭೇಟಿ ಮಾಡಿ ಹೈಕೋರ್ಟ್ ಆದೇಶದ ಪ್ರಕಾರ ಅಕ್ರಮ ಪಂಪ್‌ಸೆಟ್‌ಗಳನ್ನು ತೆರವು ಮಾಡಿಸಿಕೊಡಿ ಎಂದು ಮನವಿ ಮಾಡಿದರು. ಆಗ ಜಿಲ್ಲಾಧಿಕಾರಿಗಳು ನಾಳೆ ಬೆಸ್ಕಾಂ ಹಾಗೂ ನೀರಾವರಿ ಇಂಜಿನಿಯರ್‌ಗಳ ಜೊತೆ ಚರ್ಚಿಸಿ, ಅಕ್ರಮ ಪಂಪ್‌ಸೆಟ್‌ಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದಾಗಿ ರೈತರಿಗೆ ಭರವಸೆ ನೀಡಿದರೆಂದು ದ್ಯಾವಪ್ಪ ರೆಡ್ಡಿ ತಿಳಿಸಿದರು.

ಇಇ.ಜಿಎಸ್ ಪಾಟೀಲ್, ಎಇಇ ಚಂದ್ರಕಾಂತ್, ರೈತರಾದ ಕೆ.ಎನ್ ಹಳ್ಳಿ ಚಂದ್ರಶೇಖರ್, ಭಾನುವಳ್ಳಿಯ ಕೆಂಚಪ್ಪ, ಕುಂಬಾರ್ ಬಸವರಾಜ್, ಜಿಗಳಿಯ ಎಕ್ಕೆಗುಂದಿ ರುದ್ರಗೌಡ ಕುಂಬಳೂರಿನ ಗಿರೀಶ್ ಹನುಮಂತಪ್ಪ ಮತ್ತಿರರು ಈ ವೇಳೆ ಇದ್ದರು. ಕೊಕ್ಕನೂರಿನ ನಾಗರಾಜ್ ಮತ್ತಿರರು ಈ ವೇಳೆ ಇದ್ದರು.

# ಹೆಚ್ಚು ಸುತ್ತಿನ ಪೊಟ್ಟಣದ ವಿವರ ಪ್ರಕಟಣೆ : ಕೇಂದ್ರದ ಸೂಚನೆ

ನವದೆಹಲಿ, ಜ. 30 – ಒಂದಕ್ಕಿಂತ ಹೆಚ್ಚು ಸುತ್ತಿನ ಪೊಟ್ಟಣದ ಹೊದಿಕೆ ಇರುವ ವಸ್ತುಗಳ ಬಗ್ಗೆ ಕಂಪನಿಗಳು ಮಾಹಿತಿ ಪ್ರಕಟಿಸಬೇಕು ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಈ ಬಗ್ಗೆ ನಿರ್ದೇಶನ ಪ್ರಕಟಿಸಿರುವ ಸಚಿವಾಲಯ, ಕೊಡುಗೆ ಹಾಗೂ ಬಹು ಸುತ್ತಿನ ಹೊದಿಕೆ ಇರುವ ಬಗ್ಗೆ ಪಾಕೆಟ್ ಮೇಲೆ ತಿಳಿಸಬೇಕು ಎಂದು ಹೇಳಿದೆ. ಉತ್ಪಾದಕರ ಹೆಸರು, ವಿಳಾಸ, ಆಮದು ಮಾಡಿಕೊಂಡ ಮೂಲ ದೇಶ, ಪ್ರಮಾಣ, ಉತ್ಪಾದನೆಯ ಸಮಯ ಮತ್ತಿತರೆ ವಿಷಯಗಳನ್ನು ಪ್ರಕಟಿಸುವುದು ಈ ಹಿಂದೆ ಕಡ್ಡಾಯವಾಗಿತ್ತು.

# 9ನೇ ತಾ. ಕ.ಸಾ.ಪ ಸಮ್ಮೇಳನದ ಆಯೋಜನೆ ಕುರಿತಂತೆ ಚರ್ಚಿಸಲು ಪೂರ್ವಭಾವಿ ಸಭೆ

ದಾವಣಗೆರೆ, ಜ. 30 - ದಾವಣಗೆರೆ ತಾಲ್ಲೂಕು 9ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ತಾಲ್ಲೂಕಿನ ಹೊಸಬೆಳವನೂರಿನ ಶ್ರೀ ಬಸವೇಶ್ವರ ಸಮುದಾಯ ಭವನದಲ್ಲಿ ಫೆಬ್ರವರಿ 18ರ ಶನಿವಾರ ನಡೆಸಲು ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಕಾರ್ಯಕಾರಿ ಸಮಿತಿ ತೀರ್ಮಾನಿಸಿದೆ.

ಸಮ್ಮೇಳನದ ಆಯೋಜನೆ ಕುರಿತಂತೆ ಚರ್ಚಿಸಲು ಹಾಗೂ ವಿವಿಧ ಸಮಿತಿಗಳನ್ನು ರಚಿಸಲು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪನವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಫೆ. 1ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಹೊಸ ಬೆಳವನೂರಿನ ಶ್ರೀ ಬಸವೇಶ್ವರ ಸಮುದಾಯ ಭವನದ ಆವರಣದಲ್ಲಿ ಕರೆಯಲಾಗಿದೆ.

# ಹರಿಹರದಲ್ಲಿ ಇಂದಿನಿಂದ ಪಂಚರತ್ನ ಯಾತ್ರೆ

ದಾವಣಗೆರೆ, ಜ.30- ಇದೇ 31 ಹಾಗೂ ಫೆ.1ರಂದು ಹರಿಹರ ತಾಲ್ಲೂಕಿನಲ್ಲಿ ಜೆಡಿಎಸ್‌ನ ಪಂಚರತ್ನ ರಥಯಾತ್ರೆ ಸಂಚರಿಸಲಿದೆ ಎಂದು ಪಕ್ಷದ ಜಿಲ್ಲಾ ವಕ್ತಾರ ಜೆ.ಅಮಾನುಲ್ಲಾ ಖಾನ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, 31ರ ಮಂಗಳವಾರ ಮಧ್ಯಾಹ್ನ 3 ಕ್ಕೆ ಕೊಂಡಜ್ಜಿಗೆ ಯಾತ್ರೆ ಆಗಮಿಸಲಿದೆ. ನಂತರ ಕರ್ಲಹಳ್ಳಿ, ಗುತ್ತೂರು, ಬೆಳ್ಳೂಡಿ, ಎಕ್ಕೆಗುಂದಿ, ಭಾನುವಳ್ಳಿ ಮೂಲಕ ಸಂಜೆ 6ಕ್ಕೆ ಬನ್ನಿಕೋಡು ಗ್ರಾಮಕ್ಕೆ ತೆರಳಲಿದ್ದು, ಸಂಜೆ 6 ಗಂಟೆಗೆ ಬೃಹತ್ ಸಭೆ ನಡೆಯಲಿದೆ ಎಂದರು.

ಫೆ. 1 ರಂದು ಬೆಳಿಗ್ಗೆ 9 ಗಂಟೆಯಿಂದ ಕೆ.ಬೇವಿನಹಳ್ಳಿ ಮೂಲಕ ಮಿಟ್ಲಕಟ್ಟೆ, ದೇವರಬೆಳಕೆರೆ ಕುಣೆಬೆಳಕೆರೆ, ನಿಟ್ಟೂರು ಮೂಲಕ 11.30ಕ್ಕೆ ಮಲೇಬೆನ್ನೂರಿಗೆ ಆಗಮಿಲಿದ್ದು, ಬೃಹತ್ ಬಹಿರಂಗ ಸಭೆ ನಡೆಯಲಿದೆ. ನಂತರ ಜಿಗಳಿ, ಜಿ. ಬೇವಿನಹಳ್ಳಿ, ಕೊಕ್ಕನೂರು, ಹಿಂಡಸಘಟ್ಟ, ಗೋವಿನಹಾಳ್, ವಾಸನ, ಕಡರನಾಯಕನಹಳ್ಳಿ, ಹೊಳೆಸಿರಿಗೆರೆ, ಕಮಲಾಪುರ ಮೂಲಕ ಸಂಜೆ 5.30ಕ್ಕೆ ಹೊಸಳ್ಳಿ, ನಂತರ 6 ಗಂಟೆಗೆ ಹರಿಹರ ನಗರಕ್ಕೆ ಆಗಮಿಸಲಿದ್ದು, ಫಕ್ಕೀರ ಸ್ವಾಮಿ ಮಠದಿಂದ ಭವ್ಯ ಮೆರವಣಿಗೆ ಹಾಗೂ ಗಾಂಧಿ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಯಲಿದೆ ಎಂದು ಹೇಳಿದರು.

ಯಾತ್ರೆಯಲ್ಲಿ ಹೆಚ್.ಡಿ. ಕುಮಾರಸ್ವಾಮಿ, ಸಿ.ಎಂ. ಇಬ್ರಾಹಿಂ, ಎನ್.ಎಂ. ರವಿ, ಎಲ್.ಎಸ್. ಭೋಜೇಶ್, ನಿಂಗಯ್ಯ, ನಿಖಿಲ್ ಕುಮಾರ ಸ್ವಾಮಿ ಸೇರಿದಂತೆ ರಾಜ್ಯ ಹಾಗೂ ಜಿಲ್ಲಾ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಟಿ.ಅಸ್ಗರ್, ಬಾತಿ ಶಂಕರ್, ನರಸಿಂಹಮೂರ್ತಿ, ಜಮೀರ್ ಅಹ್ಮದ್, ಸೈಯ್ಯದ್ ಇಮ್ತಿಯಾಜ್, ಎಸ್.ಹೆಚ್. ದುಗ್ಗೇಶ್, ಇಮ್ತಿಯಾಜ್ ಖಾನ್, ಇಬ್ರಾಹಿಂ ಉಪಸ್ಥಿತರಿದ್ದರು.

# ಸಾಮರಸ್ಯ ಮೂಡಿಸುವುದೇ ಹುಣ್ಣಿಮೆ ಉದ್ದೇಶ

**(3ನೇ ಪುಟದಿಂದ)** ರದ್ದು ಮಾಡಿ ಜಾತಿಗಳ ನಡುವಿನ ಸಂಘರ್ಷಗಳಿಗೆ ಪೂರ್ಣ ವಿರಾಮ ಹಾಕಲಾಯಿತು. ಆಗ ಎಲ್ಲಾ ಜನಾಂಗದವರು ಸಾಮರಸ್ಯದಿಂದ ಬದುಕಲು ಅವಕಾಶ ಮಾಡಿಕೊಟ್ಟ ಉದಾಹರಣೆಯಿದೆ ಎಂದ ಶ್ರೀಗಳು ಅಂದಿನ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರ ಸಹಕಾರವನ್ನು ಸ್ಮರಿಸಿದರು.

## ಕಡ್ಲೇಬಾಳಿನಲ್ಲಿಂದು ದಶಮಿ

ದಾವಣಗೆರೆ ತಾಲ್ಲೂಕು ಕಡ್ಲೇ ಬಾಳು ಗ್ರಾಮದಲ್ಲಿ ಶ್ರೀ ಮಧ್ವನ ವಮಿ ರಥೋತ್ಸವದ ಅಂಗವಾಗಿ ಇಂದು ದಶಮಿ ಕಾರ್ಯಕ್ರಮ ನಡೆ ಯಲಿದೆ. ಬೆಳಿಗ್ಗೆ 6.30 ಕ್ಕೆ ಪಂಚಾ ಮೃತ ಅಭಿಷೇಕ, ಪುಷ್ಪಾಲಂಕಾರ ನಂತರ ಅವಭೃತ ಸ್ನಾನ (ಓಕುಳಿ), 8.30 ಕ್ಕೆ ವಾಯುಸ್ತುತಿ ಪುನಶ್ಚರಣ ಹಾಗೂ ಶ್ರೀ ರಾಘವೇಂದ್ರ ಅಷ್ಟೋತ್ತರ, ಬೆಳಿಗ್ಗೆ 10.30 ಕ್ಕೆ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ, ಬೆಳಿಗ್ಗೆ 11ಕ್ಕೆ ದಾವಣಗೆರೆ ಭಾರತಿ ಭಜನಾ ಮಂಡಳಿ, ನಂದಕಿಶೋರ ಭಜನಾ ಮಂಡಳಿ, ಹರಿಹರ ವೈಷ್ಣವಿ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ. ಬೆಳಿಗ್ಗೆ 11.30 ಕ್ಕೆ ಮಣ್ಣೂರು ರಾಮಚಂದ್ರಚಾರ್ ಅವರಿಂದ ಪ್ರವಚನ, ಮಧ್ಯಾಹ್ನ 1 ಗಂಟೆಗೆ ಮಹಾ ಮಂಗಳಾರತಿ, ತೀರ್ಥಪ್ರಸಾದ ನಡೆಯಲಿದೆ.

## ಬಡವರಿಗೆ, ಕೂಲಿ ಕಾರ್ಮಿಕರಿಗೆ ಸೈಕಲ್ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಇಂದು ಸಂಜೆ 5.15ಕ್ಕೆ ಬಡವರಿಗೆ, ಕೂಲಿ ಕಾರ್ಮಿಕರಿಗೆ ಸೈಕಲ್ ವಿತರಣೆ ಕಾರ್ಯಕ್ರಮ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ದಂತ ವೈದ್ಯ ಡಾ. ಬಸಪ್ಪ, ಶ್ರೀಮತಿ ವಿಮಲಮ್ಮ ಹೆಬ್ಬಾಳ್, ರಾಮನಗೌಡ ಕುಸಗೂರು ಆಗಮಿಸುವರು. ಕಾರ್ಯಕ್ರಮದ ಅಧ್ಯಕ್ಷಯನ್ನು ಡಾ. ಹೆಚ್.ಎನ್. ಮಲ್ಲಿಕಾರ್ಜುನ್ ವಹಿಸುವರು.

## ವಜೀರ್ ಅಹಮ್ಮದ್ ನಿಧನ



ದಾವಣಗೆರೆ ಸಿಟಿ ಕೆ.ಟಿ.ಜೆ ನಗರ 14ನೇ ಕ್ರಾಸ್ 3ನೇ ಮೇನ್ ವಾಸಿ ವಜೀರ್ ಅಹಮ್ಮದ್ (62) ಇವರು ದಿನಾಂಕ 27.1.2023ರ ಶುಕ್ರವಾರ ಬೆಳಿಗ್ಗೆ 9.20ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.01.2023ರ ಶುಕ್ರವಾರ ಸಂಜೆ 5.30ಕ್ಕೆ ಪಿ.ಬಿ ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ನೆರವೇರಿಸಲಾಯಿತು.

# ಹರಿಹರ : ಅಪರಿಚಿತ ಪುರುಷನ ಶವ ಪತ್ತೆ



ಹರಿಹರ, ಜ.30- ಹರಿಹರ ತಾಲ್ಲೂಕಿನ ಹೈವೇ ಪ್ಯಾಲೇಸ್ ಡಾಬಾದ ಬಳಿ ಮಾನಸಿಕ ಅಸ್ವಸ್ಥನೋರ್ವ ಮೃತಪಟ್ಟಿರು ತ್ತಾನೆ. ಶವವನ್ನು ದಾವಣಗೆರೆ ಸಿ.ಜಿ ಆಸ್ಪತ್ರೆಯ ಶವಾಗಾರದ ಶೈತ್ಯಾಗಾರದಲ್ಲಿ ಇರಿಸಿದೆ. ಸುಮಾರು 30 ವರ್ಷ ವಯಸ್ಸಿನ ಈತ, ದುಂಡು ಮುಖ ಗೋಧಿ ಬಣ್ಣ, ಸಾಧಾರಣ ಮೈಕಟ್ಟು, ಕುತ್ತಿಗೆ ಕೆಳಗೆ ಕಪ್ಪು ಮಚ್ಚೆ, ಸಿಮೆಂಟ್ ಬಣ್ಣದ ಬರ್ಮೋಡಾ ಧರಿಸಿದ್ದಾನೆ. ಸಂಬಂಧಪಟ್ಟವರು ಹರಿಹರ ಗ್ರಾಮಾಂತರ ಠಾಣೆ (08192-272017 ಅಥವಾ 9480803258) ಯನ್ನು ಸಂಪರ್ಕಿಸಲು ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯ ಪಿ.ಎಸ್.ಐ ಬಿ.ಎಸ್. ಅರವಿಂದ್ ತಿಳಿಸಿದ್ದಾರೆ.

# ಪಾಕಿಸ್ತಾನದಲ್ಲಿ ಬಾಂಬ್ ಸ್ಫೋಟ ; 61 ಜನ ಸಾವು

**(3ನೇ ಪುಟದಿಂದ)** ಆತ್ಮಹತ್ಯಾ ಬಾಂಬರ್ ಪ್ರಾರ್ಥನೆಯ ಮೊದಲ ಸಾಲಿನಲ್ಲಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತೆಹರೀಕ್ ಎ ತಾಲಿಬಾನ್ ಪಾಕಿಸ್ತಾನ್ ಸಂಘಟನೆ ದಾಳಿಯ ಹೊಣೆ ಹೊತ್ತುಕೊಂಡಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ತಾಲಿಬಾನ್‌ನ ಉಮರ್ ಖಾಲಿದ್ ಖುರಾಸಾನಿ, ಕಳೆದ ವರ್ಷ ಆಗಸ್ಟ್‌ನಲ್ಲಿ ಅಫ್ಘಾನಿಸ್ತಾನದಲ್ಲಿ ನನ್ನ ಸಹೋದರನೂ ಆಗಿದ್ದ ತಾಲಿಬಾನ್ ಕಮಾಂಡರ್ ಹತ್ಯೆ ಮಾಡಲಾಗಿತ್ತು. ಇದಕ್ಕೆ ಪ್ರತೀಕಾರವಾಗಿ ದಾಳಿ ನಡೆಸಲಾಗಿದೆ ಎಂದಿದ್ದಾನೆ.

ಪಾಕಿಸ್ತಾನ ತಾಲಿಬಾನ್ ಈ ಹಿಂದೆಯೂ ಹಲವು ಬಾರಿ ಭದ್ರತಾ ಸಿಬ್ಬಂದಿಯನ್ನು ಗುರಿಯಾಗಿಟ್ಟುಕೊಂಡು ಆತ್ಮಹತ್ಯಾ ದಾಳಿ ನಡೆಸಿದೆ. ಸ್ಫೋಟದ ತೀವ್ರತೆಯಿಂದಾಗಿ ಮಸೀದಿಯ ಒಂದು ಭಾಗ ಕುಸಿದಿದೆ.

ಹಲವರು ಅವಶೇಷಗಳಡಿ ಸಿಲುಕಿರುವ ಸಾಧ್ಯತೆ ಇದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಲೀಸ್ ಲೇನ್‌ನಲ್ಲಿರುವ ಮಸೀದಿಗೆ ನಾಲ್ಕು ಸುತ್ತಿನ ಭದ್ರತೆ ಇದೆ. ಇದರ ನಡುವೆಯೂ ಬಾಂಬರ್ ನುಸುಳಿದ್ದಾನೆ.

ಸ್ಫೋಟ ಸಂಭವಿಸಿದಾಗ 300ರಿಂದ 400 ಅಧಿಕಾರಿಗಳು ಸ್ಥಳದಲ್ಲಿದ್ದರು. ರಕ್ಷಣಾ ವೈಫಲ್ಯವಾಗಿರುವುದು ಕಂಡು ಬರುತ್ತಿದೆ ಎಂದು ಪೇಷಾವರ ನಗರ ಪೊಲೀಸ್ ಅಧಿಕಾರಿ ಮೊಹಮ್ಮದ್ ಇಜಾಜ್ ಖಾನ್ ತಿಳಿಸಿದ್ದಾರೆ.

ಪೇಷಾವರದ ಆಸ್ಪತ್ರೆಗಳಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. ಗಾಯಗೊಂಡವರಿಗೆ ನೆರವಾಗಲು ರಕ್ತದಾನ ಮಾಡುವಂತೆ ಮನವಿ ಮಾಡಿಕೊಳ್ಳಲಾಗಿದೆ.

ಸ್ಫೋಟದ ನಂತರ ಪಾಕಿಸ್ತಾನದ ಪ್ರಮುಖ ನಗರಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

ಕಳೆದ ವರ್ಷ ನಗರದ ಕೊಚಾ ರಿಸಲ್ದರ್ ಪ್ರದೇಶದಲ್ಲಿರುವ ಮಸೀದಿಯ ಮೇಲೆ ಇದೇ ರೀತಿಯ ಬಾಂಬ್ ದಾಳಿ ನಡೆದು 63 ಜನ ಸಾವನ್ನಪ್ಪಿದ್ದರು.

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಜನವರಿ 31, 2023



**ವಾಲಿಬಾಲ್ ಪಂದ್ಯ**

ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ಕರ್ನಾಟಕ ಕಾನೂನು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಅಂತರ ಕಾಲೇಜು ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಗಳು ನಡೆದವು. ರಾಜ್ಯದ ವಿವಿಧ ಜಿಲ್ಲೆಗಳಿಂದ 38 ತಂಡಗಳ 493 ಕ್ರೀಡಾಪಟುಗಳು ಭಾಗವಹಿಸಿದ್ದರು.


# ಸಿ.ಡಿ. ಮುಂದಿಟ್ಟು ಬೆದರಿಸುವ ಡಿಕೆಶಿ

## ಉನ್ನತ ಮಟ್ಟದ ಅಧಿಕಾರಿಗಳು, ಎಲ್ಲಾ ಪಕ್ಷದ ನಾಯಕರು, ಉದ್ಯಮಿಗಳು ಸಿ.ಡಿ. ಪ್ರಕರಣದಲ್ಲಿದ್ದಾರೆ: ಮಾಜಿ ಸಚಿವ ರಮೇಶ್ ಜಾರಕಿಹೊಳಿ ಆರೋಪ

ಬೆಂಗಳೂರು, ಜ. 30 – ಲೈಂಗಿಕ ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಗಂಭೀರ ಆರೋಪ ಮಾಡಿರುವ ಮಾಜಿ ಸಚಿವ ರಮೇಶ್ ಜಾರಕಿಹೊಳಿ, ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ವಹಿಸುವಂತೆ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನಷ್ಟೇ ಅಲ್ಲ ಇನ್ನೂ ಹಲವರು ಸಿ.ಡಿ. ಪ್ರಕರಣಗಳಲ್ಲಿ ಸಿಲುಕಿದ್ದಾರೆ. ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಉದ್ಯಮಿಗಳೂ ಇದ್ದಾರೆ. ಸಿ.ಡಿ.ಗಳ ಮೂಲಕ ಅವರನ್ನು ಹೆದರಿಸಿ ತಮ್ಮ ಇಷ್ಟ ಕಾರ್ಯಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ಈ ಗಂಭೀರ ಪ್ರಕರಣವನ್ನು ಸರ್ಕಾರ ತಕ್ಷಣ ಸಿ.ಬಿ.ಐ.ಗೆ ವಹಿಸಬೇಕು ಎಂದು ಒತ್ತಾಯಿಸಿದರು.

ಸಿ.ಡಿ. ಲೇಡಿ ಬಂಧಿಸಿದರೆ, ಎಲ್ಲಾ ವಿಚಾರವೂ ಹೊರಗೆ ಬರುತ್ತದೆ. ಶಿವಕುಮಾರ್ ನೆರಳಲ್ಲೇ



**ನಾನು ಮತ್ತು ಡಿ.ಕೆ ಶಿವಕುಮಾರ್ ಇಬ್ಬರು ಒಳ್ಳೆಯ ಸ್ನೇಹಿತರಾಗಿದ್ದೆವು, ನಮ್ಮಿಬ್ಬರಿಗೂ ಒಳ್ಳೆಯ ಭವಿಷ್ಯವಿತ್ತು. ಗ್ರಾಮೀಣ ಶಾಸಕಿಯಿಂದ ನನ್ನ ಸಂಬಂಧ ಹಾಳಾಯಿತು, ಮುಂದೆ ಕಾಂಗ್ರೆಸ್ ಸರ್ವನಾಶವೂ ವಿಷಕನ್ಯೆಯಿಂದಲೇ .**

ಬೆಂಗಳೂರಿನ ಮಹಿಳಾ ಪದಾಧಿಕಾರಿಯೊಬ್ಬರ ಮನೆಯಲ್ಲಿ ಆ ಲೇಡಿ ಇದ್ದಾರೆ ಎಂದೂ ಜಾರಕಿಹೊಳಿ ಹೇಳಿದರು. ಸಿ.ಡಿ. ಪ್ರಕರಣವಾದ ಮೇಲೆ ಡಿಕೆಶಿ ಅವರಿಗೆ ಹೆದರಿಕೆ ಉಂಟಾಗಿತ್ತು. ನಾನು ಮಾಡಿಲ್ಲ ಎಂದು ಹೇಳಿದ್ದರು. ಬೆಳಗಾವಿ ಜಿಲ್ಲೆಯವರು ಈ ಸಿಡಿ ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದ್ದರು. ಆದರೆ, ನಾನು ಇಂದು ಬಿಡುಗಡೆ ಮಾಡಿರುವ ಆಡಿಯೋದಲ್ಲಿ ಇವರೇ ಅದರ ಪಿತಾಮಹಾ ಎಂಬುದು ಸಾಬೀತಾಗಿದೆ ಎಂದು ತಿಳಿಸಿದರು.

ನಾನು ಬಿಡುಗಡೆ ಮಾಡಿರುವ ಆಡಿಯೋದಲ್ಲಿ ಶಿವಕುಮಾರ್ ಸಾವಿರಾರು ಕೋಟಿ ರೂ.ಗಳ ಒಡೆಯ ಎಂಬ ಮಾಹಿತಿ ಇದೆ. ನನ್ನ ಹೆಸರಿನಲ್ಲಿ ಅವರು ವ್ಯವಹಾರಗಳನ್ನು ನಡೆಸಿದ್ದಾರೆ ಎಂದೂ ಆರೋಪಿಸಿದರು.

ನನ್ನ ಬಳಿ 120ಕ್ಕೂ ಹೆಚ್ಚು ದಾಖಲೆಗಳಿವೆ. ತಕ್ಷಣಕ್ಕೆ ಅವುಗಳನ್ನು ಬಿಡುಗಡೆಗೆ ಮಾಡಲ್ಲ. ಸಿ.ಡಿ.ಗಳೂ ಇವೆ. ಅವೆಲ್ಲವನ್ನೂ ಸಿಬಿಐಗೆ ನೀಡುತ್ತೇನೆ ಎಂದರು.

ದೇವನಹಳ್ಳಿಯ ರೆಸಾರ್ಟ್‌ನಲ್ಲಿ ದಾಳಿಯಾದಾಗ ಸಾಕಷ್ಟು ಜನರ ಸಿ.ಡಿ.ಗಳು ಸಿಕ್ಕಿವೆ. ಅದರಲ್ಲಿ ಉನ್ನತ ಮಟ್ಟದ ಅಧಿಕಾರಿಗಳು, ಎಲ್ಲಾ (5ನೇ ಪುಟಕ್ಕೆ)

## ಉನ್ನತ ಶಿಕ್ಷಣದಲ್ಲಿ ಎಸ್ಸಿ-ಎಸ್ಟಿ ಒಬಿಸಿ ದಾಖಲಾತಿ 47% ಹೆಚ್ಚಳ

ನವದೆಹಲಿ, ಜ. 30 – ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ 2014-15ರ ನಂತರ ಶೇ.47ರಷ್ಟು ಹೆಚ್ಚಾಗಿದೆ ಎಂದು ಎ.ಐ.ಎಸ್.ಹೆಚ್.ಇ. ಸಮೀಕ್ಷೆ ತಿಳಿಸಿದೆ.

ಈ ವರದಿ ಬಿಡುಗಡೆ ಮಾಡಿರುವ ಕೇಂದ್ರ ಶಿಕ್ಷಣ ಸಚಿವಾಲಯ, 2014-15ರಿಂದ 2020-21ರ ನಡುವೆ ದಾಖಲಾತಿ ಪ್ರಮಾಣ ಶೇ.47ರಷ್ಟು ಹೆಚ್ಚಾಗಿದೆ ಎಂದು ತಿಳಿಸಿದೆ. 2020-21ರಲ್ಲಿ 4.13 ಕೋಟಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಸೇರಿದ್ದಾರೆ. ಇವರಲ್ಲಿ ಶೇ.14.2 ಪರಿಶಿಷ್ಟ ಜಾತಿ, ಶೇ.5.8 ಪರಿಶಿಷ್ಟ ಪಂಗಡ ಹಾಗೂ ಶೇ.35.8ರಷ್ಟು ಜನರು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರು. ಶೇ.44.2ರಷ್ಟು ವಿದ್ಯಾರ್ಥಿಗಳು ಉಳಿದ ಸಮುದಾಯವದರು ಎಂದು ತಿಳಿಸಲಾಗಿದೆ.

## ಎರಡನೇ ಅಧಿಕೃತ ಭಾಷೆಯಾಗಿ ತುಳು : ಸರ್ಕಾರದಿಂದ ಸಮಿತಿ

ಬೆಂಗಳೂರು, ಜ. 30 – ತುಳು ಭಾಷೆಯನ್ನು ಕರ್ನಾಟಕದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸುವ ಸಂಬಂಧ ರಾಜ್ಯ ಸರ್ಕಾರ ಸಮಿತಿಯೊಂದನ್ನು ರಚಿಸಿದೆ.

ಈ ವಿಷಯ ತಿಳಿಸಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್, ತುಳು ಭಾಷೆಯನ್ನು ಕರ್ನಾಟಕದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸುವ ಸಂಬಂಧ, ಅಧ್ಯಯನ ನಡೆಸಿ ಸೂಕ್ತ ಶಿಫಾರಸ್ಸಿನೊಂದಿಗೆ ವರದಿ ನೀಡಲು ಡಾ. ಮೋಹನ್ ಆಳ್ವ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ ಎಂದಿದ್ದಾರೆ.

ಈ ಸಮಿತಿಗೆ ಒಂದು ವಾರದಲ್ಲಿ ವರದಿ ನೀಡಲು ಸೂಚಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

# ಉಜ್ಜೈನಿ ಪೀಠದ ಬಗ್ಗೆ ಅವಹೇಳನ ಹೇಳಿಕೆ

## ತಮ್ಮ ಹೇಳಿಕೆ ಹಿಂಪಡೆಯಲು ಕೇದಾರ ಶ್ರೀಗಳಿಗೆ ಆವರಗೊಳ್ಳ ಶ್ರೀ ಆಗ್ರಹ

ದಾವಣಗೆರೆ, ಜ. 30- ಪಂಚಪೀಠಗಳಲ್ಲಿ ಒಂದಾದ ಉಜ್ಜೈನಿ ಪೀಠದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕೇದಾರ ಪೀಠದ ಜಗದ್ಗುರುಗಳು, ತಮ್ಮ ಮಾತುಗಳನ್ನು ಹಿಂಪಡೆಯಬೇಕು ಎಂದು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಆಗ್ರಹಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಹರಿಹರ ತಾಲ್ಲೂಕು ಶಿವನಹಳ್ಳಿ ಗ್ರಾಮದಲ್ಲಿ ನಡೆದ ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಕೇದಾರ ಪೀಠದ ಜಗದ್ಗುರು ಡಾ. ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು, 'ಉಜ್ಜಯಿನಿ ಮೂಲ ಪೀಠ ಮಧ್ಯಪ್ರದೇಶದಲ್ಲಿದೆ. ಇದು ಓಡಿ ಬಂದ ಮಹಿಳೆಯಂತೆ' ಎಂಬ ಹೇಳಿಕೆ ಹಾಗೂ ಸಂವಿಧಾನವನ್ನು ಕಾಲಿನಲ್ಲಿ ತುಳಿಯುತ್ತೇವೆ' ಎಂಬ ಹೇಳಿಕೆಗಳು ಧರ್ಮ ಹಾಗೂ ದೇಶಕ್ಕೆ ಮಾಡಿದ ಅಪಮಾನ ಎಂದು ಹೇಳಿದರು.

ಸನಾತನ ಪಂಚ ಪೀಠಗಳ ಬಗ್ಗೆ ನಾಡಿನ ಉದ್ದಗಲಕ್ಕೂ ಇರುವ ಭಕ್ತರು ಜಾತಿ, ಪಂಥ ಮೀರಿ ಗೌರವ ಸಲ್ಲಿಸುತ್ತಿದ್ದಾರೆ. ಭಕ್ತಿಯಿಂದ ನಡೆದುಕೊಳ್ಳುತ್ತಾ ಬಂದಿದ್ದಾರೆ. ವೈಯಕ್ತಿಕ ವಿಚಾರಗಳನ್ನು ಬದಿಗಿಟ್ಟು ಎಲ್ಲಾ ಪಂಚ ಪೀಠಗಳು ಒಂದೇ ಎಂಬ ಭಾವವನ್ನು ಭಕ್ತರು ತೋರಿಸುತ್ತಿದ್ದಾರೆ. ಜನ ಸಾಮಾನ್ಯರಲ್ಲಿಯೇ ಇಲ್ಲದ ರಾಗ, ದ್ವೇಷ, ಅಸೂಯೆ ಪೀಠಾಧಿಪತಿಗಳಲ್ಲಿ ಏಕೆ ಎಂದು ಪ್ರಶ್ನಿಸಿದರು?




**'ಕೇದಾರ ಪೀಠದ ತಳ ಬುಡವೇ ಬಿಗಿಯಾಗಿಲ್ಲ. ಅವರು ಕೇದಾರನಾಥನ ಅರ್ಚಕರಾಗಿ ಮಾತ್ರ ಅಲ್ಲಿ ನೇಮಕಗೊಂಡಿದ್ದಾರೆ. ಕರ್ನಾಟಕದಲ್ಲಿ ನಾವು ಅವರನ್ನು ಕೇದಾರ ಜಗದ್ಗುರುಗಳು ಎಂದು ಪೂಜಿಸುತ್ತಿದ್ದೇವೆ' 'ತಮ್ಮ ಪೀಠದ ತಳ ಬುಡ ಬಿಗಿ ಇಲ್ಲದ ಅವರು, ಉಜ್ಜೈನಿ ಪೀಠದ ತಳ ಬುಡಕ್ಕೆ ಏಕೆ ಕೈ ಹಾಕಬೇಕು' ಎಂದು ಭಕ್ತರು ಕೇಳುತ್ತಿದ್ದಾರೆ. ಪಂಚ ಪೀಠಗಳ ಬಗ್ಗೆ ಸಮಾನತೆ ಇಟ್ಟುಕೊಂಡಿದ್ದ ನಮಗೇ ಅತೀವ ನೋವಾಗಿದೆ ಎಂದರೆ, ಭಕ್ತರಿಗೆ ಅದಕ್ಕಿಂತ ಹೆಚ್ಚು ನೋವಾಗಿದೆ. ಆ ನೋವನ್ನು ಭಕ್ತರು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ.**

**- ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಆವರಗೊಳ್ಳ**

ಪೀಠಾಧಿಪತಿಗಳ ನುಡಿಗಳು ಭಕ್ತರ ಬದುಕಿಗೆ ದಿಕ್ಸೂಚಿಯಾಗಿರಬೇಕು. ಮತ್ತೊಂದು ಪೀಠಕ್ಕೆ ಅವಹೇಳನಕಾರಿಯಾಗಿ ಮಾತನಾಡುವುದು ಅವರ ಸ್ಥಾನಕ್ಕೆ ಶೋಭೆಯಲ್ಲ. ಮತ್ತೊಂದು ಪೀಠದ ಮೂಲ ಇರುವಿಕೆ ಬಗ್ಗೆ ಮಾತನಾಡುವ ನೈತಿಕ ಹಕ್ಕೂ ಅವರಿಗಿಲ್ಲ ಎಂದು ಹೇಳಿದರು.

ಕೇದಾರ ಪೀಠದ ಅಧಿಕಾರವನ್ನು ನೀವು ಉಳಿಸಿ, ಬೆಳೆಸಿಕೊಂಡಿರುವುದು ಸಂತೋಷ. ಆದರೆ ಮತ್ತೊಂದು ಪೀಠದ ವಿಚಾರದಲ್ಲಿ ನೀವು ತಲೆ ಹಾಕಬಾರದು. ಉಜ್ಜೈನಿ ಪೀಠಕ್ಕಿರುವ ಲಕ್ಷಾಂತರ ಭಕ್ತ (5ನೇ ಪುಟಕ್ಕೆ)

# ಸೇವೆಯಿಂದ ಅತಿಥಿ ಉಪನ್ಯಾಸಕರ ಬಿಡುಗಡೆ ಮಾಡಲು ಸೂಚನೆ

ಬೆಂಗಳೂರು, ಜ.30- ಕಳೆದ 2021-22ನೇ ಶೈಕ್ಷಣಿಕ ಸಾಲಿಗೆ ನೇಮಕಗೊಂಡು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳನ್ನು ಇಂದು ಕಡ್ಡಾಯವಾಗಿ ಸೇವೆಯಿಂದ ಬಿಡುಗಡೆಗೊಳಿಸುವಂತೆ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಅತಿಥಿ ಉಪನ್ಯಾಸಕರು ಸಲ್ಲಿಸಿದ ಸೇವಾ ಅವಧಿಗೆ ಅನುಗುಣವಾಗಿ ಗೌರವ ಧನವನ್ನು ಪಾವತಿಸಲು ನಿರ್ದೇಶಿಸಲಾಗಿದೆ.

2021-22ನೇ ಶೈಕ್ಷಣಿಕ ಸಾಲಿಗೆ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಬಿಡುಗಡೆಗೊಳಿಸುವ ಹಾಗೂ ಪ್ರಸ್ತುತ 2022-23ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಲು ಕಾಲೇಜು ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕಳೆದ ಜ.3ರ ಪ್ರಕಟಣೆಯಂತೆ ಪ್ರಸ್ತುತ 2022-23ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರನ್ನು ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

ಈ ಸಂಬಂಧ ಆನ್‌ಲೈನ್ ಕೌನ್ಸಿಲಿಂಗ್ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದ್ದು, ಸಂಬಂಧಪಟ್ಟ ಅಭ್ಯರ್ಥಿಗಳು ವೇಳಾಪಟ್ಟಿಯನ್ವಯ (5ನೇ ಪುಟಕ್ಕೆ)

# ಪಾಕ್ ಮಸೀದಿಯಲ್ಲಿ ಆತ್ಮಹತ್ಯಾ ಬಾಂಬ್ ಸ್ಫೋಟ; 61 ಜನ ಸಾವು

ಪೇಷಾವರ, ಜ. 30 – ಪಾಕಿಸ್ತಾನದ ಬಿಗಿ ಭದ್ರತೆಯ ಪೇಷಾವರ ನಗರದ ಮಸೀದಿಯೊಂದರಲ್ಲಿ ನಡೆಸಲಾದ ಆತ್ಮಹತ್ಯಾ ಬಾಂಬ್ ಸ್ಫೋಟದಲ್ಲಿ 61 ಜನ ಸಾವನ್ನಪ್ಪಿದ್ದಾರೆ ಹಾಗೂ 150 ಜನ ಗಾಯಗೊಂಡಿದ್ದಾರೆ. ಮೃತರು ಹಾಗೂ ಗಾಯಗೊಂಡವರಲ್ಲಿ ಬಹುತೇಕರು ಪೊಲೀಸ್, ಭದ್ರತಾ ಸಿಬ್ಬಂದಿ ಹಾಗೂ ಆರೋಗ್ಯ ಅಧಿಕಾರಿಗಳಾಗಿದ್ದಾರೆ.

ಪೊಲೀಸ್ ಲೇನ್ ಪ್ರದೇಶದಲ್ಲಿರುವ ಮಸೀದಿಯಲ್ಲಿ ಮಧ್ಯಾಹ್ನ 1.40ರ ಸಮಯದಲ್ಲಿ ಬಾಂಬ್ ದಾಳಿ ನಡೆಸಲಾಗಿದೆ. ಪೊಲೀಸರು, ಸೈನಿಕ ಸಿಬ್ಬಂದಿ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸೇರಿದಂತೆ, ಹಲವರು ಮಧ್ಯಾಹ್ನದ ಪ್ರಾರ್ಥನೆ ಸಲ್ಲಿಸುವ ವೇಳೆ ದಾಳಿ ನಡೆಸಲಾಗಿದೆ. (2ನೇ ಪುಟಕ್ಕೆ)

**ತಾಲಿಬಾನ್ ದಾಳಿಯಲ್ಲಿ ಮೃತರಾದ ಬಹುತೇಕರು ಪೊಲೀಸ್, ಸೈನಿಕ ಹಾಗೂ ಆರೋಗ್ಯ ಸಿಬ್ಬಂದಿ**

# ಕೊನೆ ಭಾಗಕ್ಕೆ ತಲುಪದ ಭದ್ರಾ ನೀರು ಅಧಿಕಾರಿಗಳ ಬಳಿ ರೈತರ ಆಕ್ರೋಶ

ಮಲೇಬೆನ್ನೂರು, ಜ. 30 - ಭದ್ರಾ ಜಲಾಶಯದಿಂದ ನಾಲೆಗೆ ನೀರು ಬಿಟ್ಟು 25 ದಿನ ಕಳೆದಿದ್ದರೂ ಕೊನೆ ಭಾಗಕ್ಕೆ ಇದುವರೆಗೂ ಸರಿಯಾದ ಪ್ರಮಾಣದಲ್ಲಿ ನೀರು ಬರುತ್ತಿಲ್ಲ ಎಂದು ಅಚ್ಚುಕಟ್ಟಿನ ಕೊನೇ ಭಾಗದ ರೈತರು ಸೋಮವಾರ ಭದ್ರಾ ಅಧೀಕ್ಷಕ ಅಭಿಯಂತರರಾದ ಶ್ರೀಮತಿ ಸುಜಾತ ಅವರ ಬಳಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಭದ್ರಾನಾಲಾ ನಂ-3 ವಿಭಾಗದ ಇಂಜಿನಿಯರ್ ಕಛೇರಿಯಲ್ಲಿ ಕೊನೇ ಭಾಗದ ರೈತರ ಸಮಸ್ಯೆಯನ್ನು ಆಲಿಸಲು ಆಗಮಿಸುತ್ತಿದ್ದ ಶ್ರೀಮತಿ ಸುಜಾತ ಅವರು ರೈತರಿಗೆ ಸಮರ್ಪಕವಾಗಿ ನೀರು ಒದಗಿಸುವ ಭರವಸೆ ನೀಡಿದರು.

**ಜಿಲ್ಲಾಧಿಕಾರಿ ಭೇಟಿ ಮಾಡಿ ಅಕ್ರಮ ಪಂಪ್‌ಸೆಟ್‌ಗಳ ತೆರವಿಗೆ ಆಗ್ರಹಿಸಿದ ರೈತರು**

ಈ ವೇಳೆ ಹಾಜರಿದ್ದ ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾಮಪ್ಪ ರೆಡ್ಡಿ ಮಾತನಾಡಿ ನೀವು ಜಲಾಶಯದಿಂದ ಸಾಕಷ್ಟು ಬಿಟ್ಟಿದ್ದೀರಿ, ಆದರೆ ಬಸವಾಪಟ್ಟಣದ ಬಳಿ ಇರುವ ಆರ್2 ನಲ್ಲಿ ಮತ್ತು ಕೋಮಾರನಹಳ್ಳಿ ಕಾಲುವೆಯಲ್ಲಿ ನೀರಿನ ಮಟ್ಟ ಕಡಿಮೆ ಇದೆ. ಹಾಗಾಗಿ ಕೊನೆ ಭಾಗಕ್ಕೆ ಸರಿಯಾದ ಪ್ರಮಾಣದಲ್ಲಿ ನೀರು ಹೋಗುತ್ತಿಲ್ಲ. ಆ ಭಾಗದಲ್ಲಿ ನಾಟಿ ಕೆಲಸ ವಿಳಂಬವಾಗಿದೆ ಎಂದರು.

ಸಿರಿಗೆರೆ ರುದ್ರಪ್ಪ, ನಂದಿತಾವರೆ ಮುರುಗೇಂದ್ರಯ್ಯ, ಭಾನುವಳ್ಳಿಯ ಹೆಚ್.ಎಸ್.ಕರಿಯಪ್ಪ, ಕೆ.ಎನ್. ಹಳ್ಳಿಯ ದಿವಾಕರಪ್ಪ, ಜಿಗಳಿಯ ಬಿಳಸನೂರು ಚಂದ್ರಪ್ಪ ಮತ್ತಿತರೆ ರೈತರನ್ನು ಮಾತನಾಡಿ, (2ನೇ ಪುಟಕ್ಕೆ)

## ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಯುಗಧರ್ಮ ರಾಮಣ್ಣ ಅಧ್ಯಕ್ಷ



ಚನ್ನಗಿರಿ, ಜ.30- ದಾವಣಗೆರೆ ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನವು ಬರುವ ಮಾರ್ಚ್ 4 ಮತ್ತು 5 ರಂದು ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಹೋಬಳಿಯ ಹರನಹಳ್ಳಿ - ಕೆಂಗಾಪುರ ಗ್ರಾಮದ ಶ್ರೀ ರಾಮಲಿಂಗೇಶ್ವರ ವಿದ್ಯಾ ಸಂಸ್ಥೆಯ ಆವರಣದಲ್ಲಿ ನಡೆಯಲಿದೆ. ಸಮ್ಮೇಳನಾಧ್ಯಕ್ಷರಾಗಿ ಜಾನಪದ ಕಲಾವಿದ, ಆಶುಕವಿ ಯುಗಧರ್ಮ ರಾಮಣ್ಣ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದ್ದಾರೆ.

## ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯ ಜಯಣ್ಣ ನಿಧನ



ದಾವಣಗೆರೆ,ಜ.30- ನಗರದ ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಎಸ್.ಎಸ್. ಜಯಣ್ಣ (78) ಅವರು ಇಂದು ರಾತ್ರಿ 11.30ಕ್ಕೆ ನಿಧನರಾದರು. ಜಯಣ್ಣ, ಲಿಂ. ಶಾಮನೂರು ಶಿವಪ್ಪ ಅವರ ಜೇಷ್ಠ ಪುತ್ರ. ಮೃತರ ಪಾರ್ಥಿವ ಶರೀರವನ್ನು ನರಸರಾಜ ರಸ್ತೆ, ಎಲ್‌ಐಸಿ ಆಫೀಸ್ ಹಿಂಭಾಗದಲ್ಲಿರುವ ಅವರ ನಿವಾಸದಲ್ಲಿ ನಾಳೆ ದಿನಾಂಕ 31ರ ಮಂಗಳವಾರ ಮಧ್ಯಾಹ್ನ 2 ಗಂಟೆಯವರೆಗೆ ಇಡಲಾಗುವುದು. ನಂತರ ಮಧ್ಯಾಹ್ನ 3ಕ್ಕೆ ಬಂಬೂಬಜಾರ್‌ನಲ್ಲಿರುವ ಮೃತರ ಶಾಮನೂರು ಶಿವಪ್ಪನವರ ಕಡ್ಲೆ ಹಿಟ್ಟಿನ ಗಿರಣಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

# ಸ್ಥಳೀಯ ಕೊಳಕು ರಾಜಕೀಯದಿಂದ ತರಳಬಾಳು ಹುಣ್ಣಿಮೆಯ ಬೆಳದಿಂಗಳಿಗೆ ರಾಡಿ ಎರಚುವ ಕುತಂತ್ರ

## ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಸ್ಪಷ್ಟನೆ

ಕೊಟ್ಟೂರು, ಜ.30- ಕೊಟ್ಟೂರು ತಾಲ್ಲೂಕಿನ ಕಾಳಾಪುರದಲ್ಲಿ ನಡೆದ ದುರ್ಘಟನೆಯ ಹಿಂದೆ ಕೊಳಕು ರಾಜಕೀಯವಿದೆ. ಕುತಂತ್ರದಿಂದ ಸಮಾಜದಲ್ಲಿ ಒಡಕು ಮೂಡಿಸುವ ಸಂಚು ನಡೆದಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಖಾರವಾಗಿ ಖಂಡಿಸಿದರು.

ಶ್ರೀಮಠದಿಂದ ಉಪಕೃತನಾದ ದಾವಣಗೆರೆಯ ದೂರ್ತನೊಬ್ಬನಿಂದ ಅಮಾಯಕರ ಮೇಲೆ ದೂರು ದಾಖಲಿಸಿರುವುದು ಖಂಡನಾರ್ಹವಾದುದು. ಈ ದುರ್ಘಟನೆಯ ಹಿಂದೆ ಇರುವ ಸಂಚನ್ನು ಪೊಲೀಸ್ ಇಲಾಖೆಯು ಸರಿಯಾಗಿ ಭೇದಿಸಬೇಕು. ಕಾನೂನು ಪ್ರಜಾಹಿತ ರಕ್ಷಣೆಗೆ ಇದೆಯೇ ವಿನಃ ಅಮಾಯಕರನ್ನು ದಂಡಿಸಲು ಅಲ್ಲ. ತಪ್ಪಿತಸ್ಥರು ಯಾರೇ ಆಗಿದ್ದರೂ ಅವರಿಗೆ ತಕ್ಕ ಶಿಕ್ಷೆ ಆಗಲಿ. ನಮ್ಮ ಸದ್ಧರ್ಮ ನ್ಯಾಯಪೀಠದಿಂದ ಸಮರ್ಪಕ ನ್ಯಾಯ ಒದಗಿಸುತ್ತೇವೆ ಎಂದು ಶ್ರೀಗಳು ತಿಳಿಸಿದರು.

ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಸುದೀರ್ಘ ಚರ್ಚೆ ಮಾಡಿದ್ದೇವೆ. ಮಾಧ್ಯಮದವರು ಸತ್ಯ ಶೋಧನೆ ಮಾಡಿ, ವಸ್ತು ನಿಷ್ಠ ವರದಿ ಮಾಡಬೇಕು ಎಂದು ಶ್ರೀಗಳು ಆಗ್ರಹಿಸಿದರು. ಈ ಹಿಂದೆ ನಡೆದ ಎಲ್ಲಾ ತರಳಬಾಳು ಹುಣ್ಣಿಮೆಗಳಲ್ಲಿ ಪೋಲಿಸ್ ಇಲಾಖೆ ನೆಮ್ಮದಿಯಿಂದ ಕೆಲಸ ಮಾಡಿತ್ತು. ಆದರೆ ಸ್ಥಳೀಯ ಕೊಳಕು ರಾಜಕೀಯದಿಂದ



ಶಾಂತಿಗೆ ಭಂಗವಾಗುತ್ತಿದೆ. ಅದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಭಕ್ತರನ್ನುದ್ದೇಶಿಸಿ ಮಾತನಾಡಿದರು.

ಧರ್ಮ ಗುರುಗಳಾಗಿ ಧರ್ಮ ಕಾರ್ಯಗಳನ್ನು ಮಾಡಬೇಕೇ ವಿನಃ ಅಧರ್ಮ ಕಾರ್ಯಗಳನ್ನು ಮಾಡಬಾರದು ಎಂದ ಶ್ರೀಗಳು, ನಾವು ಸತ್ಯದ ಪರ ಮತ್ತು ಧರ್ಮದ ಪರವಾಗಿರುತ್ತೇವೆ.

ನಮಗೆ ಜಾತಿಯ ಸಂಕುಚಿತ ಭಾವನೆಗಳಿಲ್ಲ. ನಮ್ಮ ಮಠ ಸ್ವಾತಂತ್ರ್ಯ ಪೂರ್ವದಿಂದಲೂ ಜಾತ್ಯತೀತವಾಗಿ ಅನ್ನ, ಅಕ್ಷರ ದಾಸೋಹ ನಡೆಸಿಕೊಂಡು ಬಂದಿದೆ ಎಂದು ಶ್ರೀಗಳು ಸೂಚ್ಯವಾಗಿ ತಿಳಿಸಿದರು.

ದುರ್ಘಟನೆಯಲ್ಲಿ ಒಳಗಾಗಿರುವವರಿಗೆ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಯಲ್ಲಿ ವಿಶೇಷ ಚಿಕಿತ್ಸೆಯನ್ನು ಉಚಿತವಾಗಿ ನೀಡಿಸಲಾಗುತ್ತಿದೆ. ಅಲ್ಲಿ ಸಾಧ್ಯವಾಗದಿದ್ದರೆ ಬೆಂಗಳೂರಿನ ಉನ್ನತ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತದೆ. ಜಾತ್ಯತೀತವಾಗಿ ಶ್ರೀ ಮಠದಿಂದ ಚಿಕಿತ್ಸೆಯ ವೆಚ್ಚ ಭರಿಸಲಾಗುವುದು ಎಂದು (5ನೇ ಪುಟಕ್ಕೆ)

### ಕಾಳಾಪುರ ಗ್ರಾಮವನ್ನು ಶ್ರೀಮಠದಿಂದ ದತ್ತು

ಕಾಳಾಪುರ ಗ್ರಾಮವನ್ನು ಶ್ರೀಮಠದಿಂದ ದತ್ತು ಪಡೆದು ಅಭಿವೃದ್ಧಿ ಪಡಿಸಲಾಗುವುದು ಎಂದು ಶ್ರೀಗಳು ಬಹಿರಂಗವಾಗಿ ಘೋಷಿಸಿದರು.

ಗ್ರಾಮದ ಸರ್ವಜನಾಂಗದವರು ಸುಖ ಶಾಂತಿಯಿಂದ ಬದುಕುವಂತಾಗಬೇಕು.

ತರಳಬಾಳು ಹುಣ್ಣಿಮೆಗೆ ಸಂಗ್ರಹವಾಗಿರುವ ನಿಧಿಯಿಂದ ಗ್ರಾಮಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸಲಾಗುವುದು. ಹಣದ ಕೊರತೆಯಾದರೆ ಸರ್ಕಾರದಿಂದ ಸಹಾಯ ಪಡೆಯದೇ ಶ್ರೀಮಠದ ಹಣದಿಂದ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುವುದು ಎಂದು ತಿಳಿಸಿದರು.

### ಕಾನೂನು ಇರುವುದು ದುರ್ಬಲರ ರಕ್ಷಣೆಗೆ

ಕಾನೂನು ಇರುವುದು ದುರ್ಬಲ ವರ್ಗದವರನ್ನು ರಕ್ಷಣೆ ಮಾಡಲಿಕ್ಕೆ. ಆದರೆ ಪ್ರಬಲರಿಂದ ಕಾನೂನು ದುರ್ಬಳಕೆಯಾಗುತ್ತಿದೆ.

ಕಾನೂನು ಮಾರ್ಗದರ್ಶನ ಮಾಡಬೇಕೇ ವಿನಃ ಶಾಂತಿಗೆ ಭಂಗ ಮಾಡಬಾರದು ಎಂದ ಶ್ರೀಗಳು, ಕಾಳಾಪುರದ ಘಟನೆ ಬಗ್ಗೆ, ಸತ್ಯ ಹೊಸಿಲು ದಾಟುವಷ್ಟೊತ್ತಿಗೆ ಸುಳ್ಳು ಊರನ್ನೆಲ್ಲ ಸುತ್ತಾಡಿಕೊಂಡು ಬಂದಂತಾಗಿದೆ. ಅಂತೆಕಂತೆಗಳಿಂದ ದೇಶಾದ್ಯಂತ ಹಬ್ಬಿರುವ ಸುದ್ದಿಯಿಂದ ನಮಗೆ ನೋವಾಗಿದೆ ಎಂದ ಶ್ರೀಗಳು, ಸಂಚುಗಳಿಗೆ ನಿರಾಪರಾಧಿಗಳು ಬಲಿಯಾಗಬಾರದು ಎಂದರು.

### ಸಾಮರಸ್ಯ ಮೂಡಿಸುವುದೇ ಹುಣ್ಣಿಮೆ ಉದ್ದೇಶ

ತರಳಬಾಳು ಹುಣ್ಣಿಮೆಯ ಉದ್ದೇಶ ಸಾಮರಸ್ಯ ಮೂಡಿಸುವುದೇ ಆಗಿದೆ. ಜಾತಿ - ಜಾತಿಗಳ ನಡುವೆ ಘರ್ಷಣೆಗೆ ಅವಕಾಶ ಮಾಡಿಕೊಡುವುದಲ್ಲ. ಭಾವೈಕ್ಯ ಪರಿಷತ್ತೆಂದು ಹೆಸರಾಗಿರುವ ತರಳಬಾಳು ಹುಣ್ಣಿಮೆಗೆ ಕೊಟ್ಟೂರಿನಲ್ಲಿ ಕಪ್ಪು ಚುಕ್ಕಿಯಾಗಲು ಬಿಡುವುದಿಲ್ಲ.

1993 ರಲ್ಲಿ ಜಗಳೂರು ಪಟ್ಟಣದಲ್ಲಿ ತರಳಬಾಳು ಹುಣ್ಣಿಮೆ ಆಚರಣೆ ಮಾಡುವ ಸಂದರ್ಭದಲ್ಲಿ ನೂರಾರು ದೂರುಗಳಿದ್ದವು. ಎಲ್ಲಾ ದೂರುಗಳನ್ನು (2ನೇ ಪುಟಕ್ಕೆ)




# ಗ್ರ್ಯಾಚ್ಯುಟಿ, ಮಾಸಿಕ ಪಿಂಚಣಿಗೆ ಒತ್ತಾಯ

## ಜಯದೇವ ವೃತ್ತದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ದಾವಣಗೆರೆ, ಜ. 30- ನಿವೃತ್ತಿ ಹೊಂದಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಗ್ರ್ಯಾಚ್ಯುಟಿ ಮತ್ತು ಮಾಸಿಕ ಪಿಂಚಣಿ ಜಾರಿಗೊಳಿಸುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಶನ್ ಜಿಲ್ಲಾ ಸಮಿತಿ ವತಿಯಿಂದ ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ನಿವೃತ್ತ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವ ಸರ್ಕಾರದ ಧೋರಣೆಯನ್ನು ಪ್ರತಿಭಟನಾಕಾರರು ಖಂಡಿಸಿದರು.

ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ಗ್ರ್ಯಾಚ್ಯುಟಿ ಸೌಲಭ್ಯ ಹಾಗೂ ಮಾಸಿಕ 5 ಸಾವಿರ ರೂ ಪಿಂಚಣಿಯನ್ನು ನೀಡಲು ರಾಜ್ಯ ಸರ್ಕಾರ ಕೂಡಲೇ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನೆಯಡಿ 20 ರಿಂದ 30 ವರ್ಷಗಳ ಕಾಲ ನಿರಂತರವಾಗಿ ದುಡಿದು ನಿವೃತ್ತಿ ಹೊಂದಿರುವ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ವಿಶ್ರಾಂತಿ ಜೀವನವನ್ನು ಅತ್ಯಂತ ಜಿಗುಪ್ಸೆಯಿಂದ ನಡೆಸುವಂತಾಗಿದೆ ಎಂದು ತಮ್ಮ ಅಳಲನ್ನು ತೋಡಿಕೊಂಡರು.

ಗ್ರ್ಯಾಚ್ಯುಟಿ ಸೌಲಭ್ಯಕ್ಕಾಗಿ ಒತ್ತಾಯಿಸಿ ನಿವೃತ್ತ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಫೆ. 9 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಲಿದ್ದಾರೆ.

ಫೆಡರೇಶನ್ ರಾಜ್ಯ ಸಂಚಾಲಕ ಆವರಗೆರೆ ಚಂದ್ರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಜಿಲ್ಲಾಧ್ಯಕ್ಷೆ ಎಂ.ಬಿ. ಶಾರದಮ್ಮ, ಜಿಲ್ಲಾ ಖಜಾಂಚಿ ವಿಶಾಲಾಕ್ಷಿ ಮೃತ್ಯುಂಜಯ, ತಾಲ್ಲೂಕು ಅಧ್ಯಕ್ಷೆ ರೇಣುಕಾ, ಕಾಳಮ್ಮ ಕೆ. ಸುಧಾ, ಸರ್ವಮ್ಮ, ರೇಣುಕಮ್ಮ ಮತ್ತಿತರರು ಪಾಲ್ಗೊಂಡಿದ್ದರು.

# ಹೆಣ್ಣು - ಗಂಡು ಪರಸ್ಪರ ಬೆಂಬಲಿಸುವ ಸಮಾಜ ಬೇಕು

## ಕೊಟ್ಟೂರು ತರಳಬಾಳು ಹುಣ್ಣಿಮೆಯಲ್ಲಿ ಉಪನ್ಯಾಸಕಿ ನಾಗಶ್ರೀ ತ್ಯಾಗರಾಜ್

ಕೊಟ್ಟೂರು, ಜ. 30 – ಮಹಿಳೆಗೆ ರಕ್ಷಣೆಯ ಅಗತ್ಯ ಎಷ್ಟಿದೆಯೋ, ಸಮಾನತೆಯ ಅಗತ್ಯವೂ ಅಷ್ಟೇ ಇದೆ. ಗಂಡು ಹಾಗೂ ಹೆಣ್ಣನ್ನು ಸಮಾನವಾಗಿ ಕಾಣುತ್ತಾ, ಪರಸ್ಪರ ಬೆಂಬಲಿಸುವ ಸಮಾಜ ನಿರ್ಮಾಣವಾಗಬೇಕಿದೆ ಎಂದು ಚಿಕ್ಕಮಗಳೂರಿನ ಉಪನ್ಯಾಸಕಿ ನಾಗಶ್ರೀ ತ್ಯಾಗರಾಜ್ ಅಭಿಪ್ರಾಯ ಪಟ್ಟಿದ್ದಾರೆ.

ಕೊಟ್ಟೂರಿನಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಮೂರನೇ ದಿನದಂದು ಆಯೋಜಿಸಲಾಗಿದ್ದ ಮಹಿಳಾ ಚಿಂತನ ಗೋಷ್ಠಿಯಲ್ಲಿ ಅವರು ಮಾತನಾಡಿದರು.

12ನೇ ಶತಮಾನದ ಅಕ್ಕಮಹಾದೇವಿಯವರಿಂದ ಹಿಡಿದು ಇಂದಿನ ಉದ್ಯಮಿ ಇಂದ್ರಾ ನೂಯಿ ಅವರವರೆಗೆ ಮಹಿಳೆಯರು ಹಲವಾರು ವಲಯಗಳಲ್ಲಿ ಸಾಧನೆ ಮಾಡಿದ್ದಾರೆ. ಆದರೆ, ಅವರನ್ನು 'ಹೆಣ್ಣು' ಎಂಬ ಸೀಮಿತ ಚೌಕಟ್ಟಿನಲ್ಲೇ ನೋಡಲಾಗುತ್ತದೆ. ಕಚೇರಿಗಳಲ್ಲಿ 'ಸರ್' ಎಂಬ ಮಾತಿನಲ್ಲಿ ಕಾಣುವ ಗೌರವ 'ಮೇಡಂ' ಎಂದಾಗ ಇರುವುದಿಲ್ಲ ಎಂದು ವಿಷಾದಿಸಿದರು.

ಆದರೂ, ಇತ್ತೀಚೆಗೆ ಸಮಾಜ ಬದಲಾಗುತ್ತಿದೆ. ಮಹಿಳೆಯರ ಸಾಧನೆಯನ್ನು ಬೆಂಬಲಿಸಲಾಗುತ್ತಿದೆ. ಹೀಗಾಗಿ ಮಹಿಳಾ ವಾದದ ಚಿಂತನೆಗಳು ಈಗ ಮಹಿಳಾ ಸಂವೇದಿಯಾಗಿ ಬದಲಾಗುತ್ತಿವೆ. ಹೆಣ್ಣಿಗೆ ರಕ್ಷಣೆಯ ಅಗತ್ಯವಿರುವಷ್ಟೇ ಸಮಾನತೆಯ ಅಗತ್ಯವೂ ಇದೆ. ಇದನ್ನು ಅರಿತು ಗಂಡು - ಹೆಣ್ಣು ಪರಸ್ಪರವಾಗಿ ಬೆಂಬಲಿಸುವ ಸಮಾಜ ಬೇಕಿದೆ ಎಂದು ಹೇಳಿದರು.

ಬೆಂಗಳೂರಿನ ಹೃದಯ ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಮಾತನಾಡಿ, ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರ ಎನ್ನುತ್ತೇವೆ. ಆದರೆ, ಈ ಮೂವರಿಗೂ ಗುರುವಾದವಳು ಅರುಂಧತಿ ಎಂಬುದು ಬಹಳಷ್ಟು ಜನರಿಗೆ ಗೊತ್ತಿಲ್ಲ. ಅರುಂಧತಿ - ವಶಿಷ್ಟರ ರೀತಿ ನವದಂಪತಿ ಸಮಾನವಾಗಿ ಇರಲಿ ಎಂಬ ಆಶಯದೊಂದಿಗೆ ನವ ವಿವಾಹಿತರಿಗೆ ಅರುಂಧತಿ ನಕ್ಷತ್ರ ತೋರಿಸಲಾಗುತ್ತದೆ ಎಂದರು.

12ನೇ ಶತಮಾನದಲ್ಲಿ ಅಕ್ಕ ನಾಗಮ್ಮ ಬಸವಣ್ಣನವರಿಗೆ ಬೆನ್ನೆಲುಬಾಗಿ ಅದ್ಭುತ ಕೆಲಸ ಮಾಡಿದ್ದರು. 18ನೇ ಶತಮಾನದಲ್ಲಿ ಅಹಲ್ಯಾ ಬಾಯಿ ಹೋಳ್ಕರ್ ಅವರು ಕಾಶಿ, ಹರಿದ್ವಾರ ಮುಂತಾದ ಕಡೆ 3,150 ದೇವಾಲಯಗಳ ಪುನರುತ್ಥಾನ ಮಾಡಿದರು. ಇಂತಹ ಸ್ತ್ರೀ ಪರಂಪರೆಯ ಬಗ್ಗೆ ಅರಿತು ಗೌರವಿಸಬೇಕಿದೆ ಎಂದರು.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ವೇದಿಕೆಯ ಮೇಲೆ ಕುಶಾಲನಗರದ ಸ್ವರ್ಣ ಮಂದಿರದ ಬೌದ್ಧ ಭಿಕ್ಷು ತೇನ್ ಸಿಂಗ್ ಯೆಶಿ, ಚಿಕ್ಕಮಗಳೂರಿನ ಇಹ್ಸಾನ್ ಕರ್ನಾಟಕದ ಮುಖ್ಯ ಕಾರ್ಯನಿರ್ವಾಹಕ ಮೌಲಾನ ಮಹಮ್ಮದ್ ಅನ್ವರ್ ಅಸಾದಿ, ಜಗಳೂರು ಶಾಸಕ ಎಸ್.ವಿ. ರಾಮಚಂದ್ರಪ್ಪ, ಮಾಜಿ ಸಚಿವೆ ಭಾಗೀರಥಿ ಮರುಳಸಿದ್ದನಗೌಡ, ಮಾಜಿ ಶಾಸಕ ನೇಮಿರಾಜ ನಾಯ್ಕ ಮತ್ತಿತರರು ಉಪಸ್ಥಿತರಿದ್ದರು.



### ಕದ್ದ ಶೂಸ್ ಪದಕಕ್ಕೆ ನೆರವಾಯಿತು : ಬಿ.ಎಲ್. ಭಾರತಿ

ಬೇರೆಯವರ ಚಪ್ಪಲಿ ಹಾಕಿದರೆ ದರಿದ್ರ ಬರುತ್ತದೆ ಎನ್ನುತ್ತಾರೆ. ಆದರೆ, ನನ್ನ ಕ್ರೀಡಾ ದಿನಗಳ ಆರಂಭದಲ್ಲಿ ಹೊಸ ಸ್ಪೋರ್ಟ್ಸ್ ಶೂಸ್ ಖರೀದಿಸಲು ಹಣವಿಲ್ಲದಿದ್ದಾಗ ಬೇರೆಯವರು ಧರಿಸಿದ್ದ ಶೂಸ್ ಧರಿಸಿ, ಬಂಗಾರದ ಪದಕ ಗೆದ್ದಿದ್ದೆ ಎಂದು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಉಪಾಧ್ಯಕ್ಷೆಯೂ ಆಗಿರುವ ಅಂತರರಾಷ್ಟ್ರೀಯ ಕ್ರೀಡಾಪಟು ಬಿ.ಎಲ್. ಭಾರತಿ ಹೇಳಿದರು. ಬಡತನದ ಹಿನ್ನೆಲೆಯಲ್ಲಿ ಹೊಸ ಕ್ರೀಡಾ ಶೂಸ್ ಖರೀದಿಸುವ ಸಾಮರ್ಥ್ಯ ಇರಲಿಲ್ಲ. ಕದ್ದಿರುವ ಚಪ್ಪಲಿ ಮಾರುವ ಕೆ.ಆರ್. ಮಾರುಕಟ್ಟೆಯ ಒಂದು ಅಂಗಡಿಯಲ್ಲಿ ಉತ್ತಮ ಗುಣಮಟ್ಟದ ಶೂಸ್ ಖರೀದಿಸಿದ್ದೆ. ಅದೇ ಪದಕ ಗೆಲ್ಲಲು ನೆರವಾಯಿತು ಎಂದವರು ನೆನಪಿಸಿಕೊಂಡರು.

ಈಗ ಕ್ರೀಡಾಪಟುಗಳ ಸಾಧನೆಗೆ ಸಾಕಷ್ಟು ಅವಕಾಶಗಳಿವೆ. ಹೆಣ್ಣು ಮಕ್ಕಳು ಶಾರ್ಟ್ಸ್ ಹಾಕಿಕೊಂಡು ಕ್ರೀಡೆಯಲ್ಲಿ ಪಾಲ್ಗೊಂಡರೆ ಬೇರೆಯವರು ಏನೆನ್ನುತ್ತಾರೆ ಎಂಬ ಚಿಂತೆಯಿಂದ ಹೊರ ಬರಬೇಕು ಎಂದು ತಿಳಿಸಿದರು.

## ನಗರದ ರಾಯರ ಮಠದಲ್ಲಿ ಮಧ್ವ ನವಮಿ



ದಾವಣಗೆರೆ, ಜ. 30 - 'ಶ್ರೀ ಮಧ್ವ ನವಮಿ' ಪ್ರಯುಕ್ತ ನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮುಂಜಾನೆ ಅಷ್ಟೋತ್ತರ, ಪಂಚಾಮೃತ ಅಭಿಷೇಕ ಮತ್ತು ವೇದ ಪಂಡಿತ ಶ್ರೀ ಪುರಂದರಾಚಾರ್ಯರಿಂದ ಶ್ರೀ ಮಧ್ವಾಚಾರ್ಯರ ಬಗ್ಗೆ ಅವರ ಗ್ರಂಥ ರಚನೆಗಳ ಕುರಿತು ಉಪನ್ಯಾಸ, ರಥೋತ್ಸವದ ಮೆರವಣಿಗೆ, ತೀರ್ಥ ಪ್ರಸಾದ ವ್ಯವಸ್ಥೆ ಏರ್ಪಡಿಸಲಾಗಿತ್ತು.

ಉತ್ಸವದಲ್ಲಿ ಮಠದ ವ್ಯವಸ್ಥಾಪಕ ಸುತೀರ್ಥ ಕಟ್ಟಿ, ಜಯತೀರ್ಥಾಚಾರ್ ವಡೇರ್, ಕೆಎಸ್‌ಎಫ್‌ಸಿ ನಾಗರಾಜ್, ಪ್ರಕಾಶ್ ನಾಡಿಗೇರ್, ಶ್ರೀಧರ್, ಸುಶೀಲೇಂದ್ರಚಾರ್, ಎಂ.ಬಿ.ಬದರೀನಾಥ್, ಗುರುರಾಜ್ ಜೋಶಿ, ಕಾಶೀನಾಥ್, ವ್ಯಾಸರಾಜ್, ಸುಷಮೀಂದ್ರ ಎನ್. ರಾವ್, ಭರಮಸಾಗರದ ಅನಂತಪದ್ಮನಾಭ ರಾವ್, ರಾಮಚಂದ್ರ ರಾವ್ ಮತ್ತು ಇತರರು ಭಾಗವಹಿಸಿದ್ದರು.

## ಬೆಳದಿಂಗಳಿಗೆ ರಾಡಿ ಎರಚುವ ಕುತಂತ್ರ

(3ನೇ ಪುಟದಿಂದ) ವೆಚ್ಚ ಭರಿಸಲಾಗುವುದು ಎಂದು ಶ್ರೀಗಳು ಸಭೆಗೆ ತಿಳಿಸಿದರು. ಅಧಿಕಾರ ಇರುವಲ್ಲಿ ಸೇವಾ ಮನೋಭಾವನೆ ಇರುವುದಿಲ್ಲ, ಸೇವಾ ಮನೋಭಾವ ಇರುವಲ್ಲಿ ಅಧಿಕಾರ ಇರುವುದಿಲ್ಲ. ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಎಂಬುದು ಭೌತವಿಜ್ಞಾನದಲ್ಲಿ ನ್ಯೂಟನ್ನನ ನಿಯಮವಿದೆಯಾದರೂ ಅದು ಸಾಮಾಜಿಕ ಸ್ತರದಲ್ಲಿ ಹಾಗೆ ಆಗಲು ಸಾಧ್ಯವಿಲ್ಲ. ಸಾಮಾಜಿಕವಾಗಿ ಕ್ರಿಯೆಗೆ ಅಸಮಾನವಾದ ಪ್ರತಿಕ್ರಿಯೆ ಇರುತ್ತದೆ ಎಂದು ಶ್ರೀಗಳು ಮಾರ್ಮಿಕವಾಗಿ ನುಡಿದರು.

# ಉಜ್ಜೈನಿ ಪೀಠದ ಬಗ್ಗೆ ಅವಹೇಳನ ಹೇಳಿಕೆ

(3ನೇ ಪುಟದಿಂದ) ಸಂಪತ್ತು ಬೇರೆ ಇಲ್ಲ. ಜನರು ಈಗ ಬುದ್ಧಿವಂತರಾಗಿದ್ದಾರೆ. ಸುಳ್ಳುಗಳನ್ನು ನಂಬುವುದಿಲ್ಲ. ಭಕ್ತರ ಹೆಜ್ಜೆ ನೋಡಿ ಗುರುಗಳು ಸಾಗಬೇಕಾದ ಸೂಕ್ಷ್ಮ ಕಾಲ ಇದು. ಭಕ್ತರನ್ನು ದಿಕ್ಕು ತಪ್ಪಿಸುವ ಹೇಳಿಕೆಗೆ ನಮ್ಮ ವಿರೋಧವಿದೆ ಎಂದು ಹೇಳಿದರು.

ಪೀಠಗಳ ಬಗ್ಗೆ ಆಂತರಿಕ ಕಲಹಗಳಿದ್ದರೆ ಮುಕ್ತವಾಗಿ ಕುಳಿತು ಬಗೆಹರಿಸಿಕೊಳ್ಳಬೇಕು. ಬಹಿರಂಗ ವೇದಿಕೆಯಲ್ಲಿ ನೀಡುವ ಹೇಳಿಕೆಗಳು ಪೀಠಕ್ಕೆ ಶೋಭೆ ತರುವುದಿಲ್ಲ ಎಂದರು. ಎಲ್ಲಾ ಪೀಠಗಳು ಸಮಾನ ಎಂಬ ಭಾವನೆ, ಗೌರವ, ವಿಶ್ವಾಸ ಇಟ್ಟುಕೊಳ್ಳಲಿ. ಬೇಡವಾದರೆ ಅವರ ಪಾಡಿಗೆ ಅವರಿರಬೇಕು. ಮತ್ತೊಂದು ಪೀಠಕ್ಕೆ ಅವರು ಗುರುಗಳೇ ಅಲ್ಲ, ಪೀಠವೇ ಇಲ್ಲ ಎಂದು ಹೇಳಲು ಇವರ್ಯಾರು? ಇವರೇ ಈಗ ಕೇದಾರದಿಂದ ಬಂದು ಹರಿಹರ ಬಳಿ ಹಿಮಗಿರಿ ಎಂದು ಮಾಡಿಕೊಂಡು ಕುಳಿತಿಲ್ಲವೇ? ಮೂಲ ಪೀಠ ಕೇದಾರ ಎಂದು ಹೇಳುವುದಿಲ್ಲವೇ?. ಉಜ್ಜೈನಿ ಪೀಠ ಓಡಿ ಬಂದ ಮಹಿಳೆಯಂತಾದರೆ, ಅಂತಹ ಪೀಠದಿಂದಲೇ ಇವರು ಅಧಿಕಾರ ತೆಗೆದುಕೊಂಡಿಲ್ಲವೇ? ಎಂದು ಅಸಮಾಧಾನ ಹೊರ ಹಾಕಿದರು.

ನಮ್ಮ ದೇಶದ ಸಂವಿಧಾನಕ್ಕೆ ಪೂಜ್ಯ ಸ್ಥಾನವಿದೆ. ಅಂತಹ ಸಂವಿಧಾನಕ್ಕೂ ಕೀಳು ಮಟ್ಟದಲ್ಲಿ ಅವಹೇಳನ ಮಾಡಿ, ಅಗೌರವ ತೋರಿರುವುದು ನೋವಿನ ಸಂಗತಿ. ಉನ್ನತ ಸ್ಥಾನದಲ್ಲಿ ಕುಳಿತವರು ಗೌರವಯುತ ಹೇಳಿಕೆ ನೀಡಬೇಕು ಎಂದು ಹೇಳಿದರು.

ಶಿವಗಂಗಾ ಕ್ಷೇತ್ರದ ಡಾ.ವಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಪಂಚ ಪೀಠಗಳು ಒಂದು ಕೈಯ್ಯಲ್ಲಿನ ಐದು ಬೆರಳುಗಳಂತೆ. ನಾಡಿನ ಜನರು ಎಲ್ಲಾ ಪೀಠಗಳನ್ನು ಗೌರವಿಸುತ್ತಿದ್ದಾರೆ. ಮಡಿವಂತಿಕೆ ದೂರ ಸರಿಸಿ, ತಳ ಸಮುದಾಯವನ್ನೂ ಹತ್ತಿರಕ್ಕೆ ಕರೆದು ಸೇವೆ ಸ್ವೀಕರಿಸುತ್ತಿದ್ದ ಪೀಠವೆಂದರೆ ಉಜ್ಜೈನಿ ಪೀಠ. ಅಂತಹ ಪೀಠದ ಬಗ್ಗೆ ಕೇದಾರ ಶ್ರೀಗಳು ಕೀಳು ಶಬ್ಧ ಬಳಸಿರುವುದು ಎಲ್ಲಾ ಸಮುದಾಯದ ಭಕ್ತರ ಭಾವನೆಗೂ ಧಕ್ಕೆ ತಂದಿದೆ ಎಂದರು.

ಕಾವಿ ಇರುವುದು ದೇಶ ಸೇವೆ ಹಾಗೂ ಈಶ ಸೇವೆಯ ಬಗ್ಗೆ ಅರಿವು ಮೂಡಿಸಲು. ಆದರೆ ಇವರು ಈಶ ಭಕ್ತಿ ಹಾಗೂ ದೇಶ ಭಕ್ತಿ ಎರಡನ್ನೂ ಕೆಡಿಸುವ ಕೆಲಸ ಮಾಡಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೊಟ್ಟೂರು ಚಾನುಕೋಟಿ ಶ್ರೀ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಮುಷ್ಠೂರಿನ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಗಂಗಾಧರ ಸ್ವಾಮಿ ಕಂಬಾಳಿ ಮಠ ಉಪಸ್ಥಿತರಿದ್ದರು.

## ಬೆದರಿಸುವ ಡಿಕೆಶಿ

(3ನೇ ಪುಟದಿಂದ) ಪಕ್ಷದ ನಾಯಕರು ಇದ್ದಾರೆ ಎಂದು ಬಾಂಬ್ ಸಿಡಿಸಿದ ಜಾರಕಿಹೊಳಿ, ಕಾಂಗ್ರೆಸ್ ಪಕ್ಷ ಹಾಳಾಗಲು ಶಿವಕುಮಾರ್ ಹಾಗೂ ವಿಷಕನ್ಯೆ ಸಾಕು ಎಂದರು. ನಾನು ಒಂದು ವರ್ಷದಿಂದ ಸುಮ್ಮನೆ ಕುಳಿತಿದ್ದೆ. ನಾನು ಗಾಳಿಯಲ್ಲಿ ಗುಂಡು ಹಾರಿಸುವ ವ್ಯಕ್ತಿಯಲ್ಲ. ಈ ಪ್ರಕರಣಕ್ಕೆ ಕಾನೂನಿನ ಮೂಲಕ ಇತಿಶ್ರೀ ಹಾಡುತ್ತೇನೆ ಎಂದು ಹೇಳಿದರು.

## ನಗರದಲ್ಲಿ ಇಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯು ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದು ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ 08192-233787.

# ಉಪನ್ಯಾಸಕರ ಬಿಡುಗಡೆ ಮಾಡಲು ಸೂಚನೆ

(3ನೇ ಪುಟದಿಂದ) ಆನ್‌ಲೈನ್ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ತಿಳಿಸಲಾಗಿದೆ.

ಅತಿಥಿ ಉಪನ್ಯಾಸಕರ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟಿಸಲಾಗಿದ್ದು, ಅಂತಿಮ ಮೆರಿಟ್ ಪಟ್ಟಿ ಮತ್ತು ಕಾರ್ಯಭಾರ ಪ್ರಕಟಣೆಯನ್ನು ಫೆ.3ರಂದು ಹೊರಡಿಸಲಾಗುತ್ತದೆ. ಫೆ.4ರಿಂದ ಫೆ.8ರವರೆಗೆ ಅಂತಿಮ ಮೆರಿಟ್ ಪಟ್ಟಿಯನ್ವಯ ವಿಷಯವಾರು ಆನ್‌ಲೈನ್ ಕೌನ್ಸಿಲಿಂಗ್ ಪ್ರಕ್ರಿಯೆಗಳು ನಡೆಯಲಿವೆ. ಫೆ. 9ರಂದು ಆಯ್ಕೆ ಪಟ್ಟಿ ಪ್ರಕಟಿಸಲಾಗುತ್ತದೆ.

ಫೆ. 10ರಿಂದ ಕರ್ತವ್ಯಕ್ಕೆ ಆಯ್ಕೆಯಾದ ಅತಿಥಿ ಉಪನ್ಯಾಸಕರು ವರದಿ ಮಾಡಿಕೊಳ್ಳಬಹುದಾಗಿದೆ.

ಅತಿಥಿ ಉಪನ್ಯಾಸಕರ ಆಯ್ಕೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಮಾಹಿತಿಯಲ್ಲಿ ವ್ಯತ್ಯಾಸಗಳಿದ್ದಲ್ಲಿ ಸದರಿ ವಿವರಗಳನ್ನು ಆನ್‌ಲೈನ್ ಅರ್ಜಿಯಲ್ಲಿ ತಿದ್ದುಪಡಿ ಮಾಡಲು ಫೆ.2 ರ ಸಂಜೆ 5 ಗಂಟೆಯವರೆಗೆ ಅವಕಾಶ ನೀಡಲಾಗಿದೆ. ನಂತರ ಆನ್‌ಲೈನ್ ಮೂಲಕವಾಗಲೀ ಅಥವಾ ಖುದ್ದಾಗಿ ಪತ್ರ ಮುಖೇನ ಸಲ್ಲಿಸುವ ಯಾವುದೇ ಮನವಿಯನ್ನೂ ಸಹ ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಅಭ್ಯರ್ಥಿಗಳು ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿದಲ್ಲಿ, ಅಂತಹ ಅಭ್ಯರ್ಥಿಗಳನ್ನು ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಿಂದ ಅನರ್ಹಗೊಳಿಸಿ, ಅವರುಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ಅತಿಥಿ ಉಪನ್ಯಾಸಕರ ಆಯ್ಕೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಇಲಾಖೆಯ ಅಂತರ್ಜಾಲ ತಾಣ: https://dce.karnataka.gov.inರಲ್ಲಿ ಪ್ರಕಟಿಸಲಾಗುವುದು ಎಂದು ಕಾಲೇಜು ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

# ಬಿಬಿಸಿ ಸಾಕ್ಷ್ಯಚಿತ್ರ ತಡೆ ಪ್ರಶ್ನಿಸಿ, ಸುಪ್ರೀಂನಲ್ಲಿ ಅರ್ಜಿ

## ಇದು ಕೋರ್ಟ್‌ನ ಸಮಯ ಪೋಲು ಎಂದ ಸಚಿವ ರಿಜಿಜು

ನವದೆಹಲಿ, ಜ. 30 – ಬಿ.ಬಿ.ಸಿ. ಸಾಕ್ಷ್ಯಚಿತ್ರ ತಡೆಯುವ ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿರುವವರನ್ನು ತರಾಟೆಗೆ ತೆಗೆದುಕೊಂಡಿರುವ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, ಸುಪ್ರೀಂ ಕೋರ್ಟ್‌ನ ಅಮೂಲ್ಯ ಸಮಯವನ್ನು ಈ ರೀತಿ ಅವರು ಪೋಲು ಮಾಡುತ್ತಿದ್ದಾರೆ ಎಂದಿದ್ದಾರೆ.

ಹಿರಿಯ ಪತ್ರಕರ್ತ ಎನ್. ರಾಮ್, ವಕೀಲ ಕಾರ್ಯಕರ್ತ ಪ್ರಶಾಂತ್ ಭೂಷಣ್ ಸೇರಿದಂತೆ ಹಲವರು ಸುಪ್ರೀಂ ಕೋರ್ಟ್‌ನಲ್ಲಿ ಬಿ.ಬಿ.ಸಿ. ಸಾಕ್ಷ್ಯಚಿತ್ರಕ್ಕೆ ಸಂಬಂಧಿಸಿದಂತೆ ಅರ್ಜಿ ದಾಖಲಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ರಿಜಿಜು, ಜನ ಸಾಮಾನ್ಯರು ನ್ಯಾಯಕ್ಕಾಗಿ ದಿನಾಂಕ ಪಡೆಯಲು ಕಾಯುತ್ತಿದ್ದಾರೆ. ಮತ್ತೊಂದೆಡೆ ಸುಪ್ರೀಂ ಕೋರ್ಟ್‌ನ ಅಮೂಲ್ಯ ಸಮಯ ಹಾಳು ಮಾಡಲಾಗುತ್ತಿದೆ ಎಂದಿದ್ದಾರೆ. ಸಾಕ್ಷ್ಯಚಿತ್ರದ ತಡೆ ವಿರುದ್ಧ ದಾಖಲಾಗಿರುವ ಅರ್ಜಿಯ ವಿಚಾರಣೆಯನ್ನು ಮುಂದಿನ ವಾರ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

# ರಾಹುಲ್ ಪಾದಯಾತ್ರೆ ದುಡ್ಡು ಮಾಡಲು, ಭ್ರಷ್ಟಾಚಾರಕ್ಕಲ್ಲ ; ದೇಶದ ಶಾಂತಿ ಸೌಹಾರ್ದತೆಗಾಗಿ

ಹೊನ್ನಾಳಿ, ಜ. 30 - ರಾಷ್ಟ್ರೀಯ ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಸಾರಥ್ಯದಲ್ಲಿ ಭಾರತ್ ಜೋಡೋ ಯಾತ್ರೆಯ ಮೂಲಕ ರಾಜಕೀಯ ಸಮಾವೇಶ, ಬಹಿರಂಗ ಸಭೆ ಮತ್ತು ರ್‍ಯಾಲಿಗಳಲ್ಲಿ ಜನರು ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡಿದ್ದು, ಇದು ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರದ ಚುಕ್ಕಾಣಿ ಹಿಡಿಯುವುದು ಸೂಚನೆ ಎಂದು ಮಾಜಿ ಶಾಸಕ ಡಿ.ಜಿ.ಶಾಂತನಗೌಡ ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಪಕ್ಷದ ವತಿಯಿಂದ ಇಲ್ಲಿನ ವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಇಂದು ಏರ್ಪಾಡಾಗಿದ್ದ ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಶಸ್ವಿಯಾಗಿ ಯಾತ್ರೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಯಾತ್ರೆಯ ನೇತಾರರಾದ ರಾಹುಲ್ ಅವರ ಪಾದಯಾತ್ರೆಯು ದೇಶದ ಜನರಲ್ಲಿ ಹೊಸ ವಿಚಾರಗಳನ್ನು ಜನಮಾನಸದಲ್ಲಿ ಬೆಳೆಯುವಂತೆ ಮಾಡಿದೆ.

ಪಕ್ಷದ ರಾಜಕಾರಣಕ್ಕಿಂತ ದೇಶದ ಜನತೆಯ ಹಲವಾರು ಅಗತ್ಯ ಬೇಡಿಕೆಗಳ ಬಗ್ಗೆ ಸಂವಾದಗಳ ಮೂಲಕ ಬೆಳಕು ಚೆಲ್ಲುವಂತಾಗಿದೆ. ಈ ಯಾತ್ರೆಯು ದುಡ್ಡು ಮಾಡಲು, ಭ್ರಷ್ಟಾಚಾರಕ್ಕಲ್ಲ ದೇಶದ ಶಾಂತಿ- ಸೌಹಾರ್ದತೆಗಾಗಿ ಎಂದು ಶಾಂತನಗೌಡ ಹೇಳಿದರು. ಪಕ್ಷದ ರಾಜ್ಯ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್.ಎ.ಉಮಾಪತಿ ಮಾತನಾಡಿ, ಅನೇಕರು ಮಾಡುವ ಯಾತ್ರೆಯಲ್ಲಿ ವೈಯಕ್ತಿಕ ಬೇಡಿಕೆಗಳ ಆಶಯ ಹೊಂದಿದ್ದರೆ ರಾಹುಲ್ ಅವರ ಯಾತ್ರೆಯು ದೇಶ ಕಟ್ಟುವ ಅಂಶ ಅಡಗಿದೆ ಎಂದು ಶ್ಲಾಘಿಸಿದರು.

ನ್ಯಾಮತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಜಿ. ವಿಶ್ವನಾಥ್ ಮಾತನಾಡಿ, ಕಳೆದ 8 ವರ್ಷಗಳಿಂದ ಇತ್ತೀಚೆಗೆ ಬಿಜೆಪಿ ಪಕ್ಷವು ಧರ್ಮ-ಧರ್ಮಗಳ ನಡುವೆ ವೈಷಮ್ಯ ಮೂಡಿಸುತ್ತಿದ್ದು.

ಜಾತಿ-ಜನಾಂಗಗಳಲ್ಲಿ ಅಶಾಂತಿ ನಿರ್ಮಾಣ ಮಾಡುತ್ತಿರು ವುದನ್ನು ತಡೆಗಟ್ಟಲು 3900 ಕಿ.ಮೀ. ದೇಶ ಸಂಚ ರಿಸಿ ದೇಶ ಕಟ್ಟುವಲ್ಲಿ ಮುಂದಾಗಿದ್ದಾರೆ ಎಂದರು.

ಬಿ.ಸಿದ್ದಪ್ಪ ಮಾತನಾಡಿ, ಪ್ರತಿಯೊಬ್ಬರೂ ಶಾಂತಿ-ನೆಮ್ಮದಿಯಿಂದ ಬಾಳಬೇಕು. ಕೋಮು ಸೌಹಾರ್ದತೆ ದೇಶದಲ್ಲಿ ನೆಲೆಸುವ ನಿಟ್ಟಿನಲ್ಲಿ ರಾಹುಲ್ ಅವರು ಐತಿಹಾಸಿಕ ಪಾದಯಾತ್ರೆ ಮಾಡಿದ್ದು ಇದು ಕಾಂಗ್ರೆಸ್ ಪಕ್ಷಕ್ಕೆ ಹೆಮ್ಮೆಯ ಸಂಗತಿ ಎಂದು ಹೇಳಿದರು.



**ಹೊನ್ನಾಳಿ**

ಕೆಪಿಸಿಸಿ ಸದಸ್ಯ ಡಾ.ಈಶ್ವರ್ ನಾಯ್ಕ್, ಎಂ. ರಮೇಶ್ ಅವರುಗಳು ಮಾತನಾಡಿ, 134 ದಿನದ ರಾಹುಲ್ ನಡಿಗೆಯು ದೇಶದಲ್ಲೇ ಮೊದಲು ಎಂದು ಬಣ್ಣಿಸಿದರು.

ಈ ಸಂದರ್ಭದಲ್ಲಿ ಹೊನ್ನಾಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಶಿವಯೋಗಿ, ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆರ್.ನಾಗಪ್ಪ, ಹನುಮನಹಳ್ಳಿ ಬಸವರಾಜಪ್ಪ, ಚೀಲೂರ್ ವಾಜಿದ್ ಮಾತನಾಡಿದರು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎಚ್.ಎಸ್. ರಂಜಿತ್, ಯುವ ಕಾಂಗ್ರೆಸ್ ಅಧ್ಯಕ್ಷ ಪ್ರಶಾಂತ್ ಬಣ್ಣಜ್ಜಿ, ಎ.ಜಿ.ಪ್ರಕಾಶ್, ಎಸ್.ಎಸ್.ಬೀರಪ್ಪ, ವಸಂತನಾಯ್ಕ್, ಮಲ್ಲೇಶ್, ಎಚ್.ಡಿ. ವಿಜೇಂದ್ರಪ್ಪ, ಕೊಡತಾಳ್ ರುದ್ರೇಶ್, ಮನೋಜ್ ವಾಲಜ್ಜಿ, ದರ್ಶನ್ ಬಳ್ಳೇಶ್ವರ ಉಪಸ್ಥಿತರಿದ್ದರು.

ದೇಶ 75 ಸುವರ್ಣ ಮಹೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ದೇಶಕ್ಕಾಗಿ ಚಳಿ-ಮಳೆಯನ್ನೂ ಲೆಕ್ಕಿಸದೇ ತಮ್ಮ ಪ್ರಾಣದ ಹಂಗನ್ನೂ ತೊರೆದು ಸೆಪ್ಟೆಂಬರ್ 7 ರಿಂದ ಕನ್ಯಾಕುಮಾರಿಯಿಂದ ಜಮ್ಮು-ಕಾಶ್ಮೀರದವರೆಗೆ 75 ಜಿಲ್ಲೆಗಳು, 34 ರಾಜ್ಯಗಳಲ್ಲಿ 134 ದಿನಗಳ ಕಾಲ 4070 ಕಿ.ಮೀ. ಪಾದಯಾತ್ರೆಯನ್ನು ದೇಶದ ಇತಿಹಾಸದಲ್ಲೇ ಪ್ರಥಮ ವ್ಯಕ್ತಿ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

- ಡಿ.ಜಿ.ಶಾಂತನಗೌಡ,
ಮಾಜಿ ಶಾಸಕರು, ಹೊನ್ನಾಳಿ

## ಅದಾನಿ ಸಮೂಹದಲ್ಲಿ ಎಲ್‌ಐಸಿಯ ಶೇ.1ರಷ್ಟೂ ಹಣವಿಲ್ಲ

ಮುಂಬೈ, ಜ. 30 – ಅದಾನಿ ಸಮೂಹದಲ್ಲಿ ಸರ್ಕಾರಿ ಸ್ವಾಮ್ಯದ ಎಲ್.ಐ.ಸಿ. 36,475 ಕೋಟಿ ರೂ.ಗಳ ಸಾಲ ಹಾಗೂ ಹೂಡಿಕೆ ಇದೆ. ಇದು ವಿಮಾ ಕಂಪನಿಯ ಒಟ್ಟು ಹೂಡಿಕೆಯ ಶೇ.1ಕ್ಕಿಂತ ಕಡಿಮೆಯಾಗಿದೆ.

ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಎಲ್.ಐ.ಸಿ. ನಿರ್ವಹಿಸುತ್ತಿರುವ ಆಸ್ತಿಗಳ ಒಟ್ಟು ಮೌಲ್ಯ 41.66 ಲಕ್ಷ ಕೋಟಿ ರೂ. ಆಗಿದೆ.

ಅದಾನಿ ಸಮೂಹದ ಷೇರು ಮೌಲ್ಯ ತೀವ್ರ ಕುಸಿತ ಕಾಣುತ್ತಿರುವ ನಡುವೆ ಎಲ್.ಐ.ಸಿ. ಈ ಹೇಳಿಕೆ ನೀಡಿದೆ. ಹಿಂಡನ್‌ಬರ್ಗ್ ರೀಸರ್ಚ್ ಸಂಸ್ಥೆಯ ವರದಿ ಪ್ರಕಟವಾದ ನಂತರ ಅದಾನಿ ಸಮೂಹದ ಷೇರು ಮೌಲ್ಯ ತೀವ್ರ ಕುಸಿತ ಕಾಣುತ್ತಿದೆ. ಅದಾನಿ ಸಮೂಹದ ಕಂಪನಿಯಲ್ಲಿ ನಮ್ಮ ಪಾಲು ಹಾಗೂ ಸಾಲ 36,474.78 ಕೋಟಿ ರೂ. ಆಗಿದೆ. ಇತ್ತೀಚಿನ ವರ್ಷಗಳಲ್ಲಿ ಕಂಪನಿಯ 30,127 ಕೋಟಿ ರೂ.ಗಳ ಷೇರುಗಳನ್ನು ಖರೀದಿಸಲಾಗಿದೆ. ಪ್ರಸಕ್ತ ಈ ಷೇರುಗಳ ಮಾರುಕಟ್ಟೆ ಮೌಲ್ಯ 56,142 ಕೋಟಿ ರೂ. ಎಂದು ಎಲ್.ಐ.ಸಿ. ತಿಳಿಸಿದೆ.

ಅದಾನಿ ಸಮೂಹವು ಷೇರು ಪೇಟೆಯಲ್ಲಿ ಹತ್ತು ಕಂಪನಿಗಳನ್ನು ನೋಂದಾಯಿಸಿದೆ. ಈ ಕಂಪನಿಗಳಲ್ಲಿ ಯಾವುದರಲ್ಲಿ ಎಷ್ಟು ಹೂಡಿಕೆ ಮಾಡಲಾಗಿದೆ ಎಂಬುದನ್ನು ಎಲ್.ಐ.ಸಿ. ಬಹಿರಂಗ ಪಡಿಸಿಲ್ಲ.

ಎಲ್ಲಾ ಅದಾನಿ ಸಾಲ ಸೆಕ್ಯೂರಿಟಿಗಳ ಮಾನದಂಡ 'ಎಎ' ಆಗಿದೆ. ಹೀಗಾಗಿ ಎಲ್.ಐ.ಸಿ.ಯ ಹೂಡಿಕೆ ಐ.ಆರ್.ಡಿ.ಎ.ಐ. ನಿರ್ಬಂಧಗಳಿಗೆ ಅನುಗುಣವಾಗಿದೆ ಎಂದು ತಿಳಿಸಲಾಗಿದೆ.

## ಕೊಂಡಜ್ಜಿಗೆ ಇಂದು ಜೆಡಿಎಸ್ ಪಂಚರತ್ನ ಯಾತ್ರೆ


ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ) ಪಕ್ಷದಿಂದ ನಡೆಯುತ್ತಿರುವ ಪಂಚರತ್ನ ರಥಯಾತ್ರೆಯು ಇಂದು ಮಧ್ಯಾಹ್ನ 3 ಗಂಟೆಗೆ ಕೊಂಡಜ್ಜಿ ಮೂಲಕ ಜಿಲ್ಲೆಗೆ ಆಗಮಿಸುತ್ತಿದ್ದು, ನಾಳೆ ದಿನಾಂಕ 1ರಂದು ಹರಿಹರ ಕ್ಷೇತ್ರಾದ್ಯಂತ ಸಂಚರಿಸಿ ನಂತರ ಹರಿಹರದ ಗಾಂಧಿಮೈದಾನದಲ್ಲಿ ಸಂಜೆ 6 ಗಂಟೆಗೆ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಸಮಾವೇಶದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಹೆಚ್.ಎಸ್. ಶಿವ ಶಂಕರ್, ಜೆ. ಅಮಾನುಲ್ಲಾ ಖಾನ್ ಸೇರಿದಂತೆ ಪಕ್ಷದ ಮತ್ತಿತರ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಚಿದಾನಂದಪ್ಪ ತಿಳಿಸಿದ್ದಾರೆ.

WANTED
Senior Accountant
B.Com / M.Com / MBA Finance
Experience : Minimum 5 Years
Knowledge in finalisation of books of Accounts
(Balance Sheet, Profit & Loss A/c)
GST, Tally & MS-Office preferred
MEDIWORLD PHARMA
Hadadi Rd, opp. Taralabalu school,
Shrinivaasa Nagara, Davanagere, Karnataka 577005
Mob: 63607 83905 (ನಿಯಮಗಳು ಅನ್ವಯಿಸುತ್ತವೆ)


WANTED
ACCOUNTANT (FEMALE)
MARKETING EXECUTIVE (MALE)
IMMEDIATE JOINING
Any Qulification
> 3 Years Experience
> Excellent communication skills
> Build a Strong relationship with customers
Richbon Industry
No.44/2, Anagodu Hobli, Honnur Village, Davangere - 577566.
CONTACT NO. : 9611119769
www.richbonindustry.com

ವಿದೇಶ ಪ್ರವಾಸಕ್ಕೆ ಶುಭ ಹಾರೈಕೆ



ಶ್ರೀಮತಿ ನಾಗರತ್ನ, ಜಗತ್‌ಶಂಕರ್ (ಜಗ್ಗಣ್ಣ)
(ದಿ. ಸೀತಮ್ಮ ಕೃಷ್ಣರಾವ್ ಇವರ ಮಗ) ನಮ್ಮ ಮಗಳಾದ
ಶ್ರೀಮತಿ ಚೈತ್ರಾ, ಸಂತೋಷ್‌ಕುಮಾರ್, ಕು।। ಅನಿಕಾ
ಇವರುಗಳು ಕ್ಯಾಪ್ ಜೆಮಿನಿ ಕಂಪನಿ ವತಿಯಿಂದ ಅಮೇರಿಕಾದ ಗ್ರ್ಯಾಂಡ್ ರ್‍ಯಾಪಿಡ್ಸ್ ನಗರಕ್ಕೆ ಕಾರ್ಯನಿಮಿತ್ತ ದಿನಾಂಕ : 27.01.2023ರ ರಾತ್ರಿ ಬೆಂಗಳೂರು ವಿಮಾನ ನಿಲ್ದಾಣದಿಂದ ತೆರಳಿದ್ದಾರೆ. ಅವರ ಪ್ರಯಾಣವು ಸುಖಕರವಾಗಿರಲೆಂದು ಹಾರೈಸುವ...
ಶ್ರೀಮತಿ ಶೈಲಾ, ನಿಖಿಲೇಶ್, ಅಥರ್ವ, ಅನಿಷಾ, ಶ್ರೀಮತಿ ಅನಂತರತ್ನ, ಡಾ।। ಸತೀಶ್ ಚಂದ್ರ ಶ್ರೀಮತಿ ಚನ್ನಮ್ಮ ಬಸಣ್ಣ ಕರ್ಜಗಿ ಮತ್ತು ಮಕ್ಕಳು, ಶ್ರೀಮತಿ ಮಾಲತಿ ನಂಜುಂಡರಾವ್ ಶ್ರೀಮತಿ ಶ್ರೀದೇವಿ ಗೋಪಾಲ್, ಶ್ರೀಮತಿ ಆಶಾ ಶಿವಶಂಕರ್, ಶ್ರೀಮತಿ ಜಯ್ಯಮ್ಮ, ಶ್ರೀಮತಿ ನಿರ್ಮಲ ಶ್ರೀಮತಿ ರೂಪಾ, ಶ್ರೀಮತಿ ಕಮಲಮ್ಮ ಮತ್ತು ಮಕ್ಕಳು, ಶ್ರೀಮತಿ ಶಾರದಾ ಶಾಂತಾರಾಮ್ ಅಡಿಗ, ಶ್ರೀಮತಿ ವನಜ ರಾಜೇಂದ್ರಕುಮಾರ್ ಹಾಗೂ ಬಂಧು-ಮಿತ್ರರು

## ನಗರದಲ್ಲಿ ಇಂದು ಶ್ರೀ ಸವಿತಾ ಮಹರ್ಷಿ ಜಯಂತೋತ್ಸವ



ಕೊಂಡಜ್ಜಿ ರಸ್ತೆಯಲ್ಲಿ ನಿರ್ಮಾಣದ ಹಂತದಲ್ಲಿರುವ ಸವಿತಾ ಮಹರ್ಷಿ ಸಮುದಾಯ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಸವಿತಾ ಮಹರ್ಷಿ ಜಯಂತ್ಯೋತ್ಸವ ಆಚರಿಲಾಗುವುದು ಎಂದು ಸವಿತಾ ಸಮಾಜ ಸಂಘದ ಅಧ್ಯಕ್ಷ ಎನ್. ರಂಗಸ್ವಾಮಿ ತಿಳಿಸಿದ್ದಾರೆ.

ದಾವಣಗೆರೆ ಜಿಲ್ಲೆಯ ಸವಿತಾ ಬಂಧುಗಳು ಆಗಮಿಸುವಂತೆ ರಂಗಸ್ವಾಮಿ ಅವರು ವಿನಂತಿಸಿದ್ದಾರೆ.

## ಕೆಪಿಸಿಸಿ ಪ್ರಚಾರ ಸಮಿತಿಗೆ ಗೋವಿಂದಸ್ವಾಮಿ, ಶಾಮನೂರು ಟಿ.ಬಸವರಾಜ್





ದಾವಣಗೆರೆ, ಜ.30- ಕಾಂಗ್ರೆಸ್ ಪಕ್ಷದ ಪ್ರಚಾರ ಸಮಿತಿಗೆ ದಾವಣಗೆರೆ ಜಿಲ್ಲೆಯ ಗೋವಿಂದಸ್ವಾಮಿ ಮತ್ತು ಶಾಮನೂರು ಟಿ. ಬಸವರಾಜ್ ನೇಮಕಗೊಂಡಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯ ಸಂಯೋಜಕರನ್ನಾಗಿ ಪಿ.ಸಿ.ಗೋವಿಂದಸ್ವಾಮಿ ಹಾಗೂ ದಾವಣಗೆರೆ ಜಿಲ್ಲಾಧ್ಯಕ್ಷರನ್ನಾಗಿ ಶಾಮನೂರು ಟಿ.ಬಸವರಾಜ್ ಅವರನ್ನು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಅವರು ನೇಮಕ ಮಾಡಿದ್ದಾರೆ.

## ಬಂಕಾಪುರ ನಂಜುಂಡಪ್ಪ ಶಾಲೆಯಲ್ಲಿಂದು ಬೀಳ್ಕೊಡುಗೆ




ಜಗಳೂರು ರಸ್ತೆಯಲ್ಲಿ ರುವ ಶ್ರೀ ಬಂಕಾಪುರ ನಂಜುಂಡಪ್ಪ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಎಸ್.ವಿ. ಸುಧಾ ರಾಣಿ ಎಂ. ಬನ್ನಯ್ಯ ಸ್ವಾಮಿ ಅವರು ವಯೋನಿವೃತ್ತಿ ಹೊಂದಿದ್ದು, ಅವರಿಗೆ ಬೀಳ್ಕೊಡುವ ಸಮಾರಂಭವು ಶಾಲಾ ಸಭಾಂಗಣದಲ್ಲಿಂದು ಬೆಳಿಗ್ಗೆ 11.30ಕ್ಕೆ ನಡೆಯಲಿದೆ.


JOIN OUR TEAM
WE ARE HIRING!
Front Office Executive
Female Candidates
Walk-in Interview : Wednesday 1st Feb. 2023
11:30 AM to 01:30 PM 04:00 PM to 6:00 PM
Madhuvana TOURS
# 9, Murugharajendra Complex, Hadadi Road, Davangere. M: 9141 499 499



ನ್ಯೂ ಎಂ.ಜಿ.ಎಸ್ ಜ್ಯುಯಲರ್ಸ್
ಬೆಳ್ಳಿ - ಬಂಗಾರದ ಅಂಗಡಿ
EXCLUSIVE SHOW ROOM FOR 91.6% HALLMARK JEWELLERY
ನಂ. 635/2, ಆನಂದ ಬುಕ್ ಡಿಪೋ ಎದುರು, ಮಂಡಿಪೇಟೆ ರಸ್ತೆ, ದಾವಣಗೆರೆ




ನಮ್ಮ ನ್ಯೂ ಎಂ.ಜಿ.ಎಸ್. ಜ್ಯುಯಲರ್ಸ್ 3ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ನಮ್ಮೆಲ್ಲಾ ಗ್ರಾಹಕರಿಗೆ ನಮ್ಮ ಅಂಗಡಿಯ ವತಿಯಿಂದ 3 ದಿನದ ವಿಶೇಷ ಕೊಡುಗೆ (31 Jan 1, 2 Feb)
* Terms & Condition Apply
ಯಾವುದೇ ತರಹದ 916 ಆ್ಯಂಟಿಕ್ ಆಭರಣಗಳ ಮೇಲೆ 9% VA ಮತ್ತು ಬೆಳ್ಳಿ ಆಭರಣಗಳ ಮೇಲೆ ವೇಸ್ಟೇಜ್ ಮಜೂರಿ ಇರುವುದಿಲ್ಲ
Weight X Pure Rate
ತಿಂಗಳ ಉಳಿತ ಯೋಜನೆ ಲಭ್ಯವಿದೆ
ವಿಶೇಷ ಕೊಡುಗೆ
ಸದಾ ನಿಮ್ಮ ಜೊತೆ ನ್ಯೂ ಎಂ.ಜಿ.ಎಸ್
ಬನ್ನಿ..... ಪರೀಕ್ಷಿಸಿ..... ಕೊಂಡುಕೊಳ್ಳಿ...
Mandipet Road, DAVANNGERE. Mob : 94489 29897, 94813 08777, Shop : 91106 21233


## ಎಂಟನೇ ವರ್ಷದ ಪುಣ್ಯ ಸ್ಮರಣೆ



ಹಳ್ಳಿಕೇರಿ ಬಸವರಾಜಪ್ಪ

ಜನನ : 12-05-1952 ನಿಧನ : 31-01-2015

* ಹಳ್ಳಿಕೇರಿ ಸೇಲ್ಸ್ ಕಾರ್ಪೋರೇಷನ್, * ಹಳ್ಳಿಕೇರಿ ಇಂಡಸ್ಟ್ರೀಸ್,
* ಹಳ್ಳಿಕೇರಿ ಇಂಡಸ್ಟ್ರೀಸ್, * ಹಳ್ಳಿಕೇರಿ ಫ್ಯೂಯಲ್ ಸ್ಟೇಷನ್,

ಶ್ರೀಮತಿ ನೀಲಾಂಬಿಕ ಹಳ್ಳಿಕೇರಿ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಹಳ್ಳಿಕೇರಿ ವಂಶಸ್ಥರು ಮತ್ತು ಬಂಧು-ಮಿತ್ರರು

## ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ದೈವಜ್ಞ ಸಮಾಜ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅತ್ಯಧಿಕ ಮತಗಳಿಂದ ಚುನಾಯಿತಗೊಂಡಿರುವ **ಶ್ರೀ ರಾಜೀವ್ ವಿ. ವೆರ್ಣೇಕರ್ (ಪಿಬಿವಿ)** ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

✦ ತಾನಾಜಿರಾವ್ ಜಾಧವ್, ವ್ಯವಸ್ಥಾಪಕರು
✦ ಮಾರುತಿ ಬೂದಾಳ್ ✦ ಸಂಗಪ್ಪ ಮುದ್ದಿ ✦ ಪ್ರಕಾಶ್ ರಾಯ್ಕರ್
✦ ಗಣೇಶ್ ✦ ಆಕಾಶ್ ✦ ಸುಮ ✦ ಆಶಾ

**ಪಾಂಡುರಂಗ ಬೊಮ್ಮಯ್ಯ ವೆರ್ಣೇಕರ್ ಜ್ಯುಯಲರ್ಸ್**
ದೊಡ್ಡಪೇಟೆ, ದಾವಣಗೆರೆ

## ಹೃತ್ಪೂರ್ವಕ ಅಭಿನಂದನೆಗಳು



15 ವರ್ಷದ ನಂತರ ದಿ.29.01.2023ರಂದು ನಡೆದ ದೈವಜ್ಞ ಸಮಾಜ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ

**ಪ್ರಶಾಂತ್ ಮತ್ತು ರಾಜೀವ್ ವೆರ್ಣೇಕರ್**

ನೇತೃತ್ವದ ತಂಡದಿಂದ ಸ್ಪರ್ಧಿಸಿ, ಅತ್ಯಧಿಕ ಮತಗಳಿಂದ ಆಯ್ಕೆಯಾಗಿರುವ 13 ಜನ ನಿರ್ದೇಶಕರನ್ನೊಳಗೊಂಡು ಆಯ್ಕೆಯಾಗಿರುವ ಎಲ್ಲಾ 15 ನಿರ್ದೇಶಕರುಗಳಿಗೂ ಹಾರ್ದಿಕ ಅಭಿನಂದನೆಗಳು.
ಇವರ ಅಧಿಕಾರವಧಿಯಲ್ಲಿ ದೈವಜ್ಞ ಸಮಾಜ ಸಂಘವು ಸರ್ವತೋಮುಖ ಅಭಿವೃದ್ಧಿ ಹೊಂದಲಿ ಎಂದು ಶುಭ ಹಾರೈಸುತ್ತೇವೆ. ಇವರ ಆಯ್ಕೆಗೆ ಶ್ರಮಿಸಿದ ದೈವಜ್ಞ ಯುವ ಸಮೂಹದವರಿಗೂ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದ ಸರ್ವರಿಗೂ ನಮ್ಮ ಕೃತಜ್ಞತೆಗಳು.

**ಪಿ.ಬಿ.ವಿ ಜ್ಯುಯಲರ್ಸ್, ದೊಡ್ಡಪೇಟೆ ಕೆಲಸಗಾರರು ಹಾಗೂ ಸಿಬ್ಬಂದಿ ವರ್ಗ.**

# ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಎಸ್.ಎಸ್. ಜಯಣ್ಣ ನಿಧನ



ಶ್ರೀ ಎಸ್.ಎಸ್. ಜಯಣ್ಣನವರು

ಜನನ : 12.02.1945 ನಿಧನ : 30.01.2023

ದಾವಣಗೆರೆಯ ಪ್ರತಿಷ್ಠಿತ ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಜಯಣ್ಣ,
ಲಿಂ. ಶ್ರೀ ಶಾಮನೂರು ಶಿವಪ್ಪ ಅವರ ಜೇಷ್ಠ ಪುತ್ರ

**ಶ್ರೀ ಎಸ್.ಎಸ್. ಜಯಣ್ಣ** ಅವರು

ದಿನಾಂಕ 30-01-2023ರ ಸೋಮವಾರ ರಾತ್ರಿ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 78 ವರ್ಷ ವಯಸ್ಸಾಗಿತ್ತು.

ಮೃತರು ಓರ್ವ ಸಹೋದರಿ, ಮೂವರು ಪುತ್ರರು, ಸೊಸೆಯಂದಿರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕಾಗಿ ನರಸರಾಜ ರಸ್ತೆ, ಎಲ್ಐಸಿ ಆಫೀಸ್ ಹಿಂಭಾಗದಲ್ಲಿರುವ ಅವರ ನಿವಾಸದಲ್ಲಿ ದಿನಾಂಕ 31.01.2023ರ ಮಂಗಳವಾರ ಮಧ್ಯಾಹ್ನ 2 ಗಂಟೆಯವರೆಗೆ ಇಡಲಾಗುವುದು.

ನಂತರ ಮಧ್ಯಾಹ್ನ 3 ಗಂಟೆಗೆ ಬಂಬೂಬಜಾರ್‌ನಲ್ಲಿರುವ ಮೃತರ ಶಾಮನೂರು ಶಿವಪ್ಪನವರ ಕಡ್ಲೆ ಹಿಟ್ಟಿನ ಗಿರಣಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗ –
ಮೊ. 98452-66655, 98806-55777

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte